ಶ್ರೀ ಎಸ್. ನಂಜಪ್ಪ.— ನಮಗೆ ಕುಡಿಯುವುದಕ್ಕೆ ನೀರಿಲ್ಲ ಅನ್ನುತ್ತಿರುವಾಗ ಅವರಿಗೆ ಭತ್ತ ಬೆಳೆಯುವುದಕ್ಕೆ ನೀರು ಕೊಡುತ್ತೇವೆಂದರೆ ಹೇಗೆ?

ಉಪಾಧ್ಯಕ್ಷರು.— ಅದರ ಬಗ್ಗೆ ಈಗ ಮತ್ತೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಹಾಗೆ ಬೇಕಾದರೆ ಬೇರೆ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಳ್ಳಿ. ರೂಲ್ ೩೩೪ರಲ್ಲಿ ಆ ರೀತಿ ಹೇಳುವುದಕ್ಕೆ ಬರುವುದಿಲ್ಲ.

ಶಾಸನ ರಚನಾ ಕಾರ್ಯರೂಪಗಳು

೧೯೮೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ನಗರಾಭಿವೃದ್ಧಿ ಸಚಿವರು).— ಮಾನ್ಯ ಉಪಾಧ್ಯಕ್ಷರೆ, "೧೯೮೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

ಉಪಾಧ್ಯಕ್ಷರು.— ಪ್ರಸ್ತಾವ ಏನೆಂದರೆ, ೧೯೮೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಉಪಾಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು.— ವಿಧೇಯಕವನ್ನು ಮಂಡಿಸಲಾಗಿದೆ *

ಕರ್ನಾಟಕ ಜಿಲ್ಲಾ ಪರಿಷತ್ ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ್ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ (ತಿದ್ದುಪಡಿ) ವಿಧೇಯಕ ೧೯೮೬

ಪರ್ಯಾಲೋಚನಪ್ರಸ್ತಾವ (ಮುಂದುವರಿದ ಚರ್ಚೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್).— ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಈ ಮಸೂದೆಯನ್ನು ಚರ್ಚೆಗೆ ತೆಗೆದುಕೊಂಡಾಗ ನಾನು ಕೆಲವು ಆಕ್ಷೇಪಣೆಗಳನ್ನು ಎತ್ತಿದ್ದೆ. ಆಗ ಮಾನ್ಯ ಮಂತ್ರಿಗಳಾದ ನಜೀರ್‌ಸಾಬ್‌ರವರು ತಾವು ಹೇಳತಕ್ಕ ವಾದ ಸರಿ ಎಂಬ ರೀತಿಯಲ್ಲಿ ತಮ್ಮ ವಾದವನ್ನು ಸದನದ ಮುಂದಿಟ್ಟರು. ಕೊನೆಗೆ ಈ ತಿದ್ದುಪಡಿ ಮಸೂದೆ ಪುನಃ ಇವತ್ತು ನಮ್ಮ ಮುಂದೆ ವಿಚಾರಣೆಗೆ ಬಂದಿದೆ. ಮುಖ್ಯವಾಗಿ ಈ ಜಿಲ್ಲಾ ಪರಿಷತ್ತು ಮಸೂದೆ ಏನಿದೆ ಇದಕ್ಕೆ ನನ್ನ ವೈಯಕ್ತಿಕ ವಿರೋಧ ಇಲ್ಲ, ಇದು ಒಳ್ಳೆಯ ಕಾನೂನು, ಪ್ರಗತಿಪರವಾದ ಕಾನೂನು. ಇದು ಇರಲೇಬೇಕೆಂಬುವವನು ನಾನು. ಆದರೆ ಇಂದಿನ ಸಂದರ್ಭ, ವಾತಾವರಣ ಅಷ್ಟು ಚೆನ್ನಾಗಿಲ್ಲವೆಂಬುದೇ ನನ್ನ ವಾದ.

ಶ್ರೀ ಹೆಚ್. ಡಿ. ದೇವೇಗೌಡ.— ಚುನಾವಣೆ ಮಾಡಿ ಎಂದು ಹೇಳುತ್ತೀರಿ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ವೈಯಕ್ತಿಕವಾಗಿ ಹೇಳಿದೆ. ಇದಕ್ಕೆ ಕಾರಣವೇನೆಂದರೆ ನಾನು ಹಿಂದಿನಿಂದ ಇದನ್ನು ಹೇಳಿಕೊಂಡು ಬಂದಿದ್ದೇನೆ. ಹೋದ ಸಾರಿಯೂ ಈ ಸದನದಲ್ಲಿ ಹೇಳಿದ್ದೇನೆ. ಅನೇಕ ಅಧಿಕಾರಿಗಳನ್ನು ನಾವು ಹಳ್ಳಿಯಲ್ಲಿರತಕ್ಕ ಜನತೆಗೆ ಕೊಡಬೇಕೆಂಬುದೇ ನಮ್ಮ

* Annexure

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಗುರಿಯಾಗಿದೆ. ಆದರೆ ಅದಕ್ಕೆ ತಕ್ಕಂಥ ವಾತಾವರಣವನ್ನು ಸೃಷ್ಟಿ ಮಾಡಬೇಕಾಗುತ್ತದೆ. ಆ ವಾತಾವರಣ ಇವೊತ್ತಿನ ದಿವಸ ಹಳ್ಳಿಯಲ್ಲಿ ಸೃಷ್ಟಿಯಾಗಿಲ್ಲ. ಇವೊತ್ತು ಕೂಡ ಕೆಲವೇ ಜನರ ಕೈಯಲ್ಲಿ ಅಧಿಕಾರ ಇದೆ. ಕೆಲವೇ ಜನರು ಹಳ್ಳಿಯಲ್ಲಿ ಅಧಿಕಾರ ಚಲಾಯಿಸತಕ್ಕದ್ದನ್ನು ನೋಡುತ್ತಿದ್ದೇವೆ ಚುನಾವಣಾ ಕಾಲದಲ್ಲಿ ಕೂಡ ಕೆಲವು ಹಳ್ಳಿಗಳನ್ನು ಕೆಲವು ಮುಖಂಡರು ತಮ್ಮ ಕೈಯಲ್ಲಿಟ್ಟುಕೊಂಡು ತಮ್ಮ ಒತ್ತಡವನ್ನು ಹೇರಿ ಚುನಾವಣೆ ನಡೆಸುತ್ತಾರೆ. ಯಾವುದೇ ಪಕ್ಷ ಇರಬಹುದು, ಆ ಪಕ್ಷದ ಮುಖಂಡರ ಮೇಲೆ ತಮ್ಮ ಪ್ರಭಾವ ಬೀರುತ್ತಾರೆ. ತಮಗೆ ಗೊತ್ತಿರುವ ಹಾಗೆ ಅನೇಕ ಸಂದರ್ಭಗಳಲ್ಲಿ ಹಳ್ಳಿಯಲ್ಲಿರತಕ್ಕ ಸಣ್ಣಪುಟ್ಟ ಮುಖಂಡರ ಮಾತನ್ನು ಕೇಳಿ ವರ್ಗ ಮಾಡಿಸತಕ್ಕದ್ದು. ಅವರ ಮಾತನ್ನು ಕೇಳಿ ಅವರು ಬೇಕೆಂದರೆ ಪ್ರಾಜೆಕ್ಟನ್ನು ಮಾಡಿಸುವುದು, ಬೇಡ ಎಂದರೆ ಬಿಡುವುದು-ಇಂಥದ್ದೆಲ್ಲ ಒಂದು ಕಡೆ ಅಲ್ಲ. ಅನೇಕ ಕಡೆ ಆಗುತ್ತದೆ. ಈ ರೀತಿಯ ಒತ್ತಡದಿಂದ ಅನೇಕ ಸಾರಿ ಅನ್ಯಾಯವಾಗಿರತಕ್ಕದ್ದು ನಮಗೆಲ್ಲಾ ಗೊತ್ತಾಗಿದೆ. ಇಷ್ಟಾದರೂ ಕೂಡ ಇವೊತ್ತಿನ ದಿವಸ ನಾವು ಹೆಚ್ಚಿನ ಅಧಿಕಾರವನ್ನು ಕೊಡತಕ್ಕದ್ದು ಒಳ್ಳೆಯದು. ಆದರೆ ಆ ರೀತಿ ಅಧಿಕಾರ ಕೊಡುವಾಗ ಯೋಚನೆ ಮಾಡಿಕೊಡಬೇಕೆಂದು ಹೇಳುತ್ತೇನೆ. ಏಕೆಂದರೆ ಈ ಸಮಾಜದಲ್ಲಿ ನಾವು ಪ್ರಜಾಪ್ರಭುತ್ವ ತತ್ವವನ್ನು ಎಷ್ಟೇ ಮಾತನಾಡಿದರೂ, ಪ್ರತಿ ಹಳ್ಳಿಯಲ್ಲೂ ಅದರ ಬೇರು ಹೋಗಿ ಮುಟ್ಟಿದೆ ಎಂದರೂ ಕೂಡ ಕೆಲವು ವೆಸ್ಟೆಡ್ ಇಂಟರೆಸ್ಟ್ ಕ್ಲಾಸ್ ಏನಿದ್ದಾರೆ ಅವರು ಆ ತತ್ವವನ್ನು ವಿರೋಧ ಮಾಡಿ ತಮ್ಮ ಕೈಯಲ್ಲಿ ಅಧಿಕಾರ ಇಟ್ಟುಕೊಳ್ಳಬೇಕೆಂಬ ಭಾವನೆಯಿಂದ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ನಾನು ನಜೀರ್‌ಸಾಬ್‌ರವರಿಗೆ ಹೇಳಿದ್ದು ದು ಸ್ವಲ್ಪ ಯೋಚ ಮಾಡಿ ತಾವು ಹೆಜ್ಜೆ ಇಡತಕ್ಕದ್ದು ಒಳ್ಳೆಯದು ಎಂದು ಹಿಂದಿನಿಂದ ಇರತಕ್ಕ ತಾಲ್ಲೂಕು ಬೋರ್ಡಿಗೆ ಹೆಚ್ಚಿನ ಅಧಿಕಾರ ಕೊಟ್ಟು ಅವರ ಕೈಯಿಂದ ಕೆಲಸ ಮಾಡಿಸತಕ್ಕದ್ದು ಉತ್ತಮವೆಂದು ಹೇಳಿದ್ದೇನೆಯೇ ವಿನಹ ಅಧಿಕಾರದ ವಿಕೇಂದ್ರೀಕರಣ ಆಗಬಾರದು, ಅಥವಾ ಕೆಳಗಿನ ಜನಾಂಗಕ್ಕೆ ಹಳ್ಳಿಯಲ್ಲಿರತಕ್ಕ ರೈತರಕೈಗೆ ಅಧಿಕಾರ ಹೋಗಬಾರದೆಂಬ ಉದ್ದೇಶದಿಂದ ಅಲ್ಲ.

ಆದರೆ ಯಾರ ಕೈಯಲ್ಲಿ ಅಧಿಕಾರ ಹೋಗುತ್ತದೆಯೋ ಅವರು ಇದನ್ನು ದುರುಪಯೋಗಪಡಿಸಿಕೊಳ್ಳತಕ್ಕಂಥದ್ದು ಇದೆ. ಈ ನಮ್ಮ ಸಮಾಜದ ಒಂದು ಪರಿಸ್ಥಿತಿ ಏನು ಇದೆ, ಎನ್‌ವಿರಾನ್‌ಮೆಂಟ್ ಏನು ಇದೆ, ಅದರಲ್ಲಿ ಇಂಥ ವಿಚಾರದಲ್ಲಿ ಏನಾಗಿದೆ ಎನ್ನತಕ್ಕಂಥ ಒಂದು ಸಂಶಯ ನನಗಿದೆ. ಒಂದು ಉದಾಹರಣೆ ಹೇಳಬೇಕಾದರೆ ೧೯೭೮ರ ಚುನಾವಣೆಯಲ್ಲಿ ಇಡೀ ನಮ್ಮ ಕರ್ನಾಟಕ ರಾಜ್ಯದಲ್ಲಿ ಮೈನಾರಿಟಿ ಕೋಮಿನಿಂದ ನಿಂತಂಥ ಅಭ್ಯರ್ಥಿಗಳು ಯಾರೂ ಕೂಡ ಎಲೆಕ್ಟ್ ಆಗಿ ಬರಲಿಲ್ಲ. ಈ ಕಡೆಯೂ ಬರಲಿಲ್ಲ ಆ ಕಡೆಯೂ ಬರಲಿಲ್ಲ. ಜನತಾ ಪಕ್ಷದಲ್ಲೂ ಬರಲಿಲ್ಲ, ಕಾಂಗ್ರೆಸ್ ಪಕ್ಷದಲ್ಲೂ ಬರಲಿಲ್ಲ. ಏತಕ್ಕೆ ಈ ರೀತಿಯಾಗಿದೆ ಎಂದರೆ ಆ ವಾತಾವರಣ ನಮ್ಮಲ್ಲಿಲ್ಲ. ಅನೇಕ ಸಲ ಏನೋ ಒಂದು ರೀತಿಯಲ್ಲಿ ಆರಿಸಿ ಬರಬೇಕು. ಆ ರೀತಿ ಬರುತ್ತಿದ್ದಾರೆ. ಜನತಾ ಗಾಳಿ ಬೀಸಿ ಜನ ಆರಿಸಿ ಬರುತ್ತಾರೆ. ಕಾಂಗ್ರೆಸ್ ಗಾಳಿ ಬೀಸಿ ಕಾಂಗ್ರೆಸ್ ಮುಖಂಡರು ಆರಿಸಿ ಬರುತ್ತಾರೆ. ಈ ಪರಿಸ್ಥಿತಿಯಲ್ಲಿ ಇಂಥ ವಾತಾವರಣದಲ್ಲಿ ಈ ಚುನಾವಣೆಗಳು ನಡೆದುಕೊಂಡು ಬರುತ್ತಿವೆ. ನಾವು ಎಲ್ಲೆಲ್ಲಿ ಇವತ್ತು ನಾಲ್ಕು ಸಾವಿರ ಜನಸಂಖ್ಯೆಗೆ ಒಂದು ಮಂಡಲ್ ಪಂಚಾಯಿತಿ ಮಾಡತಕ್ಕಂಥದ್ದು ಅಥವಾ ಸುಮಾರು ೨೮ ಸಾವಿರದಿಂದ ೩೦ ಸಾವಿರದ ಒಳಗೆ ನಮ್ಮ ಜಿಲ್ಲಾ ಪರಿಷತ್ ಸದಸ್ಯರನ್ನು ಆಯ್ಕೆ ಮಾಡುವಂಥದ್ದು ಇದೆ. ಈ ಅಂಕಿಸಂಖ್ಯೆಯನ್ನು ತೆಗೆದುಕೊಂಡರೆ, ಈ ರಾಜ್ಯದಲ್ಲಿದ್ದಂಥ ಪಂಚಾಯಿತಿ ಎಲೆಕ್ಷನ್ ಅಂಕಿ ಸಂಖ್ಯೆಗಳನ್ನು ಸುಮಾರಾಗಿ ತೆಗೆದುಕೊಂಡರೆ ಇದರಲ್ಲಿ ಎಷ್ಟು ಪಂಚಾಯಿತಿ ಛೇರ್ಮನ್‌ಗಳು ವೀಕರ್ ಸೆಕ್ಷನ್‌ಗೆ ಸಂಬಧಪಟ್ಟವರು ಇದ್ದಾರೆ ? ಮೈನಾರಿಟಿ ಸಮಾಜಕ್ಕೆ ಸೇರಿದ ಜನ ಎಷ್ಟು ಇದ್ದಾರೆ ಎನ್ನತಕ್ಕಂಥ ಅಂಕಿಸಂಖ್ಯೆಗಳು ನಮ್ಮ ಮುಂದಿವೆ. ಎಲೆಕ್ಷನ್‌ಗೆ ಅದು ಸಂಬಂಧಿಸಿದ್ದಲ್ಲ. ಮೂರು ಸಾವಿರ ನಾಲ್ಕು ಸಾವಿರ, ಐದು ಸಾವಿರ ಜನಸಂಖ್ಯೆ ಇದ್ದು ಅಥವಾ ಆರು ಸಾವಿರ ಆಗಿರಬಹುದು. ನೀವು ಈ ಅಂಶವನ್ನು ಗಣನೆಗೆ ತೆಗೆದುಕೊಂಡರೆ ನಿಮಗೆ ನಾನು ಹೇಳುವ ವಿಚಾರ ಅರ್ಥವಾಗುತ್ತದೆ. ಈ ಒಂದು ಪಂಚಾಯಿತಿ ಆಕ್ಟ್ ಕೆಳಗೆ ಕೆಲವೇ ಜನ ಅಧಿಕಾರವನ್ನು ಪಡೆದುಕೊಂಡು ಅವರ ಅಭಿಪ್ರಾಯದ ಮುಖಾಂತರ ಅವರಿಗೆ ಬಂದಂಥ ಬೆನಿಫಿಟ್ಸ್‌ಗಳೂ ಕೂಡ ಹಳ್ಳಿಗೆ ಹೋಗಿ ಮುಟ್ಟಲಿಕ್ಕೆ ಸಾಧ್ಯವಾಗಿಲ್ಲ. ಸ್ವಲ್ಪ ಮಟ್ಟಿಗೆ ೧೯೫೯ ಆದಮೇಲೆ ೧೯೬೦ರಲ್ಲಿ ಸ್ವಲ್ಪ ಸ್ವಲ್ಪ ಜನ ಅಲ್ಲಲ್ಲಿಯೇ ರಾಜಕೀಯವಾಗಿ ತಲೆ ಎತ್ತತಕ್ಕಂಥದ್ದು ಮೇಲೆ ಏಳತಕ್ಕಂಥದ್ದು ಕಂಡುಬರುತ್ತಿದೆ. ಇದರ ಹೊರತಾಗಿ ಇದರ ಹಿಂದೆ ಏನೂ ಆಗಿಲ್ಲ. ಇವತ್ತು ಆ ಪರಿಸ್ಥಿತಿ ಬಾರದು. ನೀವು ಮಾಡಿದಂಥ ಕಾನೂನನ್ನು ಕೆಲವೇ ಜನಾಂಗಕ್ಕೆ, ವೆಸ್ಟೆಡ್ ಇಂಟರೆಸ್ಟೆ ಕ್ಲಾಸ್‌ಗೋಸ್ಕರ ಅಥವಾ ಅವರ ಕೈಯಲ್ಲಿ ಅಧಿಕಾರ ಕೊಟ್ಟು ಶೋಷಣೆಗೆ ಒಳಪಟ್ಟಂಥ ಜನ ಏನು ಇದ್ದಾರೇ ಅವರು ಶೋಷಣೆಗೆ ಒಳಪಡಬಾರದು ಎನ್ನತಕ್ಕಂಥದ್ದು ನಮ್ಮ

ತರ್ಕ. ಇದು ಒಂದು ಕಡೆ. ಎರಡನೆಯದಾಗಿ ಸಂವಿಧಾನದ ೩೩೦-೩೩೨ರ ಪ್ರಕಾರ ನಮಗೆ ಜನಸಂಖ್ಯೆ ಆಧಾರದ ಮೇಲೆ ರಿಸರ್ವೇಷನ್ಸ್ ಕೊಡಬೇಕಾಗಿತ್ತು. ಅದಕ್ಕೆ ತಾವು ಇವೊತ್ತಿನ ದಿವಸ ಸೆಕ್ಷನ್ ೪ಕ್ಕೆ ಅಮೆಂಡ್‌ಮೆಂಟ್ ತಂದು ಆ ಒಂದು ರಿಸರ್ವೇಷನ್ ಸೀಟನ್ನು ಕಡಿಮೆ ಮಾಡಿದ್ದೀರಿ. ಏಕೆಂದರೆ ನಿನ್ನೆ ನಡೆದ ಅವರ ವಾದ ಏನು ಎಂದರೆ ಈ ೩೩೦ ರಲ್ಲಿ ಎಕ್ಸ್‌ಪ್ಲನೇಷನ್ ಏನು ಇದೆ...

> "In this article and in article 332, the expression "population" means the population as ascertained at the last preceding census of which the relevant figures have been published;
>
> Provid d that the reference in this Explanation to the last preceding census of which the relevant figures have been published shall, until the relevant figures for the first census taken after the year 2000 have been published. be construed as a reference to the 1971 census".

೧೯೭೧ರ ಸೆನ್ಸಸ್ ಪ್ರಕಾರ ಮಾಡಬೇಕು. ಇಲ್ಲದೆಹೋದರೆ ಇದು ಸಂವಿಧಾನದ ವಿರುದ್ಧವಾಗುತ್ತದೆ. ನಾವು ೮೧ರ ಸೆನ್ಸಸ್‌ನ್ನು ಲೆಕ್ಕಕ್ಕೆ ತೆಗೆದುಕೊಂಡು ಅದರ ಆಧಾರದ ಮೇಲೆ ರಿಸರ್ವೇಷನ್ ಕೊಟ್ಟರೆ ಅದು ಈ ಒಂದು ಸಂವಿಧಾನದ ವಿರುದ್ಧ ಎನ್ನತಕ್ಕಂಥದ್ದು ಅವರದು. ನಾನು ಹೇಳತಕ್ಕಂಥದ್ದು ಇಷ್ಟೆ, ೧೯೭೧ರ ಸೆನ್ಸಸ್‌ನ್ನು ಅವರು ತೆಗೆದುಕೊಳ್ಳತಕ್ಕಂಥದ್ದು ಕೇವಲ ಲೋಕಸಭೆ ಮತ್ತು ನಮ್ಮ ಲೆಜಿಸ್ಲೇಟೀವ್ ಅಸೆಂಬ್ಲಿಯಲ್ಲಿ ಹೆಚ್ಚಿನ ಸೀಟ್ಸ್ ಆಗಬಾರದು ಎನ್ನತಕ್ಕಂಥ ದೃಷ್ಟಿಯಿಂದ ಸೀಮಿತಗೊಳಿಸಿದ್ದೆ ಆದರೆ ೧೯೮೧ರ ಸೆನ್ಸಸ್ ಪ್ರಕಾರ ನೀವು ರಿಶರ್ವೇಷನ್ನು ಮಾಡಿದರೆ ಅದು ತಪ್ಪಾಗುವುದಿಲ್ಲ. ಏಕೆ ಮಾಡಬೇಕು ಎನ್ನತಕ್ಕಂಥದ್ದಕ್ಕೆ ನಾನು ಕಾರಣವನ್ನು ಹೇಳುತ್ತೇನೆ. ಈ ವಿಷಯದಲ್ಲಿ ಬಹಳ ಇಕಟ್ಟಿನಲ್ಲಿ ಸಿಕ್ಕಿಬಿದಿದ್ದೇವೆ. ಒಂದು ಕಡೆ ನೀವು ಹೇಳತಕ್ಕಂಥದ್ದು ಒಂದು ತಿದ್ದುಪಡಿಗೆ ಅನುಸಾರವಾಗಿ ಮಾತನಾಡತಕ್ಕಂಥದ್ದು ಇನ್ನೊಂದು ಕಡೆ ಸುಮಾರು ೧೬-೧೭ ಲಕ್ಷ ಜನ ಹೆಚ್ಚಿದ್ದಾರೆಂದು ೨೭ನೇ ಜುಲೈ ೭೭ರಲ್ಲಿ ಎನೋ ಸರ್ಕಾರಿ ಆಜ್ಞೆ ಬಂತು. ಅದೂ ಕೂಡ ಸಂವಿಧಾನದ ತಿದ್ದುಪಡಿಯೇ. ಆ ಒಂದು ಷೆಡ್ಯೂಲ್ಡ್ ಕ್ಯಾಸ್ಟ್ ತಿದ್ದುಪಡಿ ಬಂದಮೇಲೆ ೧೬-೧೭ ಲಕ್ಷ ಜನ ಸಂಖ್ಯೆ ಅವರು ಕಾರಣಾಂತರಗಳಿಂದ ಈ ಷೆಡ್ಯೂಲ್‌ನಲ್ಲಿರತಕ್ಕಂಥ ಜಾತಿಗಳು ಏನು ಇದೆಯೋ ಅವರು ೭೧ರ, ೬೧ ಅಥವಾ ೫೧ರ ಸೆನ್ಸಸ್ ಲಿಸ್ಟ್‌ನಲ್ಲಿ ಇರಲಿಲ್ಲ. ೧೯೭೬ರಲ್ಲಿ ಈ ಏರಿಯಾ ರೆಸ್ಟ್ರಿಕ್ಷನ್ ಏನು ರಿಮೂವ್ ಮಾಡಿದರು, ಎಂದರೆ ಇಲ್ಲಿರತಕ್ಕಂಥ ಲಂಬಾಣಿ ಜನ, ಬೋವಿ ಜನ, ಷೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ಇದ್ದುದು ಆ ಜನಾಂಗದವರು ೭೧ ರಲ್ಲಿ ಅಥವಾ ೭೬ರಲ್ಲಿ ಒಳಗೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ ಯಾವ ಯಾವ ಜಾತಿಗಳು ಇವೆ. ಅವು ಇರಲಿಲ್ಲ. ಅಂದಾಗ ಒಂದು ಕಡೆ ತಿದ್ದುಪಡಿ ಮಾಡಿ ಅವರಿಗೆ ಸವಲತ್ತು ಕೊಟ್ಟಿದ್ದೀರಿ. ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ ಸೇರಿಸಿ ಅವರಿಗೂ ಕೂಡ ಜನಸಂಖ್ಯೆ ಆಧಾರದ ಮೇಲೆ ನಾವು ರಿಸರ್ವೇಷನ್ ಕೊಡಬೇಕು ಎನ್ನತಕ್ಕಂಥದ್ದನ್ನು ಮಾಡಿಕೊಂಡಿದ್ದೇವೆ. ಮತ್ತೆ ಇನ್ನೊಂದು ಕಡೆಯಿಂದ ಈ ತಿದ್ದುಪಡಿಯಿಂದ ೭೧ರ ಸೆನ್ಸಸ್ ಪ್ರಕಾರ ೨ ಸಾವಿರ ಎ.ಡಿ. ವರೆಗೂ ಇದನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳಿದಾಗ ನೀವು ಯಾವ ರೀತಿಯಿಂದ ಇದನ್ನು ಸಾಲ್ವ್ ಮಾಡುತ್ತೀರಿ ? ಏಕೆಂದರೆ ಇವತ್ತಿನ ದಿವಸ ನೀವು ಅದನ್ನು ೧೯೮೧ ರ ಸೆನ್ಸಸ್ ಪ್ರಕಾರ ತಾವು ಷೆಡ್ಯೂಲ್ಡ್ ಕ್ಯಾಸ್ಟ್ ಪಾಪ್ಯುಲೇಷನ್ ಲೆಕ್ಕಕ್ಕೆ ತೆಗೆದುಕೊಂಡು ಅದೇ ಆಧಾರ ಇಟ್ಟುಕೊಂಡು ರಿಸರ್ವೇಷನ್ ಮಾಡಿದರೆ ಇದು ಕಾನ್ಸ್‌ಟಿಟ್ಯೂಷನ್‌ಗೆ ವಿರುದ್ಧ ಆಗಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ಇದರಲ್ಲಿ ನೀವು ಇವತ್ತು ಹೆಣ್ಣು ಮಕ್ಕಳಿಗೆ ಪ್ರಾತಿನಿಧ್ಯ ಕೊಟ್ಟಿದ್ದೀರಿ. ಮತ್ತು ಕೆಲವು ಕಡೆ ೨೫ ಪರ್ಸೆಂಟ್ ವರೆಗೂ ಕೂಡ, ಕೊಡತಕಂಥ ವ್ಯವಸ್ಥೆ ಕೂಡ, ಇದರಲ್ಲಿ ಮಾಡಿದ್ದೀರಿ. ಅದೇ ರೀತಿಯಾಗಿ ಇವತ್ತಿನ ದಿವಸ ಒಂದು ಪಾಪ್ಯುಲೇಷನ್‌ಗೆ ೯-೧೦ ಜಿಲ್ಲೆಯಲ್ಲಿ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸಬೇಕಾದರೆ ತಾವು ಕನಿಷ್ಟಪಕ್ಷ ೨೫ ಪರ್ಸೆಂಟ್ ಆದರೂ ರಿಸರ್ವೇಷನ್ ಕೊಡಬೇಕೆಂದು ಮಾಡಿ, ಇಲ್ಲ, ಅವರ ಜನಸಂಖ್ಯೆಗೆ ಅದರ ಆಧಾರದ ಮೇಲೆ ರಿಸರ್ವೇಷನ್ ಇಡತಕ್ಕಂಥದ್ದು ಮಾಡಿ. ಇಲ್ಲದಿದ್ದರೆ ತಾವು ಈ ಒಂದು ಭಾಗಕ್ಕೆ ದೊಡ್ಡ ಅನ್ಯಾಯವನ್ನು ಮಾಡಿದ ಹಾಗೆ ಆಗುತ್ತದೆ ಎಂದು ಅವರಿಗೆ ತಿಳಿಸಬಯಸುತ್ತೇನೆ.

೩-೩೦ ಪಿ.ಎಂ.

ಮಾನ್ಯ ಅಧ್ಯಕ್ಷರೇ ೯ ಜಿಲ್ಲೆಗಳಲ್ಲಿ ಸುಮಾರು ೨೨ ಲಕ್ಷ ಷೆಡ್ಯೂಲ್ ಕಾಸ್ಟ್ ಪಾಪ್ಯೂಲೇಷನ್ ಇತ್ತುಯೆಂದು ತಿಳಿದುಕೊಂಡರೂ ಕೂಡ ಇವತ್ತು ೧೭ ಲಕ್ಷದಷ್ಟು ಜನ ಇನ್ನೂ ಜಾಸ್ತಿಯಾಗಿದ್ದಾರೆ. ಏನೇ ಆದರೂ ಒಟ್ಟು ೪೭ ಲಕ್ಷ ಷೆಡ್ಯೂಲ್ ಕಾಸ್ಟ್ ಜನರು ಇದ್ದಾರೆ. ೧೯೭೧ರ ಸೆನ್ಸೆಸ್ ಪ್ರಕಾರ ನೀವು ಏನು ಸೀಟುಗಳನ್ನು ನಿಗದಿಪಡಿಸಿದ್ದೀರಿ ? ಇವರಲ್ಲಿ ರಾಜಕೀಯದಲ್ಲಿ ಭಾಗವಹಿಸಲು ಎಷ್ಟು ಜನರಿಗೆ ಸಾಧ್ಯವಾಗುತ್ತದೆ ಹಾಗೂ ಎಷ್ಟು ಜನರು ಸವಲತ್ತುಗಳನ್ನು ಪಡೆದುಕೊಳ್ಳಬಹುದು ಎಂಬುದನ್ನು ಶ್ರೀ ಅಬ್ದುಲ್ ನಜೀರ್ ಸಾಬ್‌ರವರು ಕೂಲಂಕುಷವಾಗಿ ಪರಿಶೀಲನೆ ಮಾಡಿದರೆ ಇದಕ್ಕೆ ಯಾವುದಾದರೊಂದು ಹಾದಿಯನ್ನು ಅವರೇ ಹುಡುಕಿಕೊಳ್ಳಬಹುದು. ಇಲ್ಲಿ ತಂದಿದ್ದೇನೆ. ಇದನ್ನು ಪಾಸ್ ಮಾಡೇ ಮಾಡುತ್ತೇವೆ ಎಂಬ ಛಲ ಇದ್ದರೆ ನಾವು ಏನು ಮಾಡುವುದಕ್ಕಾಗುವುದಿಲ್ಲ. ಏತಕ್ಕೆಂದರೆ ಅವರಿಗೆ ಹೆಚ್ಚಿನ ಮೆಜಾರಿಟಿ ಇದೆ.

ಶ್ರೀ ರಮೇಶ್‌ಕುಮಾರ್.—ತಾವು ಒಳ್ಳೆಯ ಪಾಯಿಂಟ್‌ಸ್ಸ್ ಹೇಳಿದ್ದೀರಿ. ಹೊಸದಾಗಿ ೧೭ ಲಕ್ಷ ಜನರನ್ನು ಸೇರಿಸಿದ್ದೀರೆಂದು ಹೇಳಿದ್ದೀರಿ. ಇದರಿಂದ ತೊಂದರೆ ಯಾಗುತ್ತದೆಂದು ಹೇಳಿದ್ದೀರಿ. ಆದರೆ ವಿಧಾನಸಭೆ ಮತ್ತು ಪಾರ್ಲಿಮೆಂಟ್ ಕ್ಷೇತ್ರಗಳಿಗೆ ಎರಡು ಸಾವಿರ ಎ.ಡಿ.ವರೆಗೆ ನಾವು ಸ್ಥಾನವನ್ನು ಹೆಚ್ಚು ಮಾಡುವುದಿಲ್ಲ. ಜನಸಂಖ್ಯೆ ಹೆಚ್ಚಾಗುತ್ತದೆ, ಅವರಿಗೆ ತೊಂದರೆಯಾಗುವುದಿಲ್ಲವೆ ? ಇದರ ಬಗ್ಗೆ ಯೋಚನೆ ಮಾಡಿದ್ದೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಪ್ರೆಸಿಡೆಂಟ್ ಆಫ್ ಇಂಡಿಯಾದವರಿಗೆ ಕಾಗದ ಬರೆದಿದ್ದೇವೆ. ನಿಮಗೆ ಏನು ರಿಲೆವೆಂಟ್ ಇದೆಯೋ ಅದನ್ನು ಮಾತ್ರ ಹೇಳುತ್ತೇನೆ.

SRI RAMESHKUMAR.—Whatever is relevant so far as people are concerned, let it not keep in confidential.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಏನು ಮಾಡುತ್ತೀರಿ ಎಂಬುದನ್ನು ನೋಡಬೇಕು, 1 have written a letter on the 9th December '85.

ಶ್ರೀ ಅಬ್ದುಲ್ ನಜೀರ್ ಸಾಬ್.—ನೀವು ಮಾಡಿದ ಕಷ್ಟವನ್ನು ನಾವು ಹೊತ್ತುಕೊಂಡು ತಿರುಗುತ್ತಾ ಇದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಂತಹ ಇಕ್ಕಟ್ಟಿನ ಪರಿಸ್ಥಿತಿ ಬಂದಿದೆ. ಅದಕ್ಕಾಗಿ ೧೯೮೧ರ ಸೆನ್ಸಸ್ ಪ್ರಕಾರ ಅವರು ಕನ್‌ಸಿಡರ್ ಮಾಡುವುದಕ್ಕೆ ಏನೂ ತಾಪತ್ರಯವಿಲ್ಲ. ಇನ್ನೊಂದು ೪ನೇ ಸೆಕ್ಷನ್ ಪ್ರಕಾರ ಈ ರೀತಿ ಹೇಳಿದ್ದೀರಿ.

> "Provided also that the Deputy Commissioner, may, after previous publications with the permission of the Government declare any area comprising a village, a group of villages having a population of either less than 8000 or more than 12,000 to be a Mandal"

ಎಂದರೆ ಡೆಪ್ಯೂಟಿ ಕಮಿಷನರ್‌ಗೆ ಎಷ್ಟು ಅಧಿಕಾರವನ್ನು ಕೊಟ್ಟಿದ್ದೀರಿ less the 8000, ಅಂದರೆ ಐದು ಸಾವಿರ ಆಗಬಹುದು, ಅಥವಾ ೧೦ ಸಾವಿರ ಆಗಬಹುದು, There is no limit. ಕೊನೆಯ ಪಕ್ಷ ಎರಡು ಸಾವಿರ ಇರಬಹುದು. ಏನಾದರೂ ಒಂದು ಮಿತಿ ಹಾಕಬೇಕಾಗಿತ್ತು. ಆದರೆ ಇಲ್ಲಿ ಏನ ಇಲ್ಲ. ಈ ಬಿಲ್ಲಿನಲ್ಲಿ ಹೇಳುವುದನ್ನು ಮತ್ತೊಮ್ಮೆ ಓದುತ್ತೇನೆ.

> "Provided also that the Deputy Commissioner may. after previous publication, with the permission of the Government, declare any area comprising a village or group of villages having a population of either less than eight thousand or more than twelve thousand to be a Mandal Panchayat,"

ಅವರು ಸ್ಪೆಷಲ್ ಪರ್ಮಿಷನ್ ತೆಗೆದುಕೊಂಡು ಮಾಡಿ ಕೊಂಡಿದ್ದಾರೆ. ಇದರ ಲಾಭವನ್ನು ಯಾರು ಯಾರುಮಾಡಿಕೊಂಡಿದ್ದಾರೆ ಎಂದರೆ ಕೆಲವು ಮುಖಂಡರು ಡೆಪ್ಯೂಟಿ ಕಮಿಷನರ್‌ರವರ ಹತ್ತಿರ ಕುಳಿತು ತಮಗೆ ಬೇಕಾದ ಎರಡು ಹಳ್ಳಿಗಳಿಗೆ ಒಂದು ಮಂಡಲ್ ಪಂಚಾಯತ್ ಮಾಡಿಕೊಂಡಿದ್ದಾರೆ. ಇನ್ನೊಂದು ಐದು ಹತ್ತು ಹಳ್ಳಿಗಳಿಗೆ ಒಂದು ಮಂಡಲ್ ಪಂಚಾಯತ್ ಮಾಡಿದ್ದಾರೆ. ಈ ಮಂಡಲ್ ಪಂಚಾಯತ್ ಸದಸ್ಯರ ಮೇಲೆ ಮುಂದಿನ ನಿಮ್ಮ ಕೌನ್ಸಿಲ್ ಎಲೆಕ್ಷನ್ ನಿಂತಿರುವುದು. ಇದರ ಪರಿಣಾಮ ಅನೇಕ ಕಡೆ ಆಗುತ್ತಾ ಇದೆ. ಒಂದು ಜಿಲ್ಲೆಯಲ್ಲಿ ೨೫-೩೦ ಮಾಡಬಹುದು, ಇನ್ನೊಂದು ಕಡೆ ಅದಕ್ಕಿಂತ ಕಮ್ಮಿ ಮಾಡಲು ಸಾಧ್ಯವಿದೆ. ನೀವು ಅವರಿಗೆ ಪವರ್ಸ್ ಆ ರೀತಿ ಕೊಟ್ಟಿದ್ದೀರಿ. ಇದಕ್ಕೆ ಏನಾದರೂ ಒಂದು ಕ್ರೈಟೀರಿಯಾ ಫಿಕ್ಸ್ ಮಾಡಿ ಆ ಕ್ರಾಯಿಟೀರಿಯಾ ಬಿಟ್ಟು ಹೋಗಬಾರದೆಂದು ಅವರಿಗೆ ಹೇಳಿ. ಡೆಪ್ಯೂಟಿ ಕಮೀಷನರ್‌ರವರು ಮನಸ್ಸಿಗೆ ಬಂದ ಹಾಗೆ ಮಾಡಲು ನೀವು ಅವಕಾಶ ಕೊಟ್ಟರೆ, ಅವರು ಯಾರನ್ನು ಕರೆಯುವುದಿಲ್ಲ. ನೀವು ಹೇಳಿದಿರಿ, ಆ ರೀತಿ ಆದೇಶ ಕೊಟ್ಟಿದ್ದೇವೆಂದು ನನ್ನ ಜಿಲ್ಲೆಯಲ್ಲಿ ಡಿ.ಸಿ. ಯವರು ನನ್ನ ಮಾತನ್ನು ಕೇಳಿಲ್ಲ. ತಹಶೀಲ್ದಾರರು ಕೆಲವು ಕಡೆ ಕೇಳಿದರೂ ಕೊನೆಗೆ, ಅವರೇ ಒಂದು ಮ್ಯಾಪ್ ಇಟ್ಟುಕೊಂಡು ಯಾವ ಹಳ್ಳಿಗಳು ಫೇವರ್‌ರ್‍ಯಾಬಲ್ ಆಗಿದಿಯೋ ಅದನ್ನು ಸೇರಿಸಿ ಉಳಿದುದನ್ನು ಕಿತ್ತು ಬಿಸಾಕಿದಂತಹ ಕೆಲಸವನ್ನು ಮಾಡಿದ್ದಾರೆ. ಇದರ ಬಗ್ಗೆ ಶ್ರೀನಿವಾಸ್‌ರವರು ವಿವರವಾಗಿ ಮಾತನಾಡುತ್ತಾರೆ, ಇದೂ ಕೂಡ ಅಸಂಬದ್ಧ ಇದೆ, ಅಲ್ಲಿ ಏನು ಹೇಳಿದ್ದೀರಿ ಎಂದರೆ, "To declare any area having population less than 8000 more than 12000 to be a Mandal". To convert muncipality verified areas Committe, Town Planning Board, sanitary Bfard to be Mandal." ಆದರೂ ಕೂಡ ಕೆಲವು ಕಡೆ ಇವತ್ತು ಮುನಿಸಿಪಾಲಿಟಿಯವರು ಚೆನ್ನಾಗಿ ಕೆಲಸ ಮಾಡುತ್ತಾ ಇವೆ. ಆದರೆ ಇವತ್ತು ನೀವು ಸಡನ್‌ಆಗಿ ಒಂದು ಆರ್ಡಿನೆನ್ಸ್ ಇಷ್ಯೂ ಮಾಡಿ ಕೆಲವು ಕಡೆ ಚೀಫ್ ಆಫೀಸರನ್ನು ತೆಗೆಯುತ್ತಾ ಇದ್ದೀರಿ. ಟೆಲಿಗ್ರಾಫ್ ಟ್ರಾನ್ಸ್‌ಫರ್ ಮಾಡುವುದನ್ನು ಈಗಾಗಲೇ ತೆಗೆದುಕೊಂಡಿದ್ದೀರಿ. ನಿಮ್ಮಲ್ಲಿ ಈಗ ಹಣವಿಲ್ಲ ಎಂದು ಒದ್ದಾಡುತ್ತಿದ್ದೀರಿ. ಇಲ್ಲದೆ ಇರತಕ್ಕ ಸಮಸ್ಯೆಗಳನ್ನು ಸೃಷ್ಟಿಮಾಡಿ ಕೊಂಡು ಜೂರಿಡಿಷನ್ ಜಾಸ್ತಿ ಮಾಡಿಕೊಳ್ಳಬೇಕೆಂದು ಮಾಡಿದ್ದೀರೋ ಏನು ಗೊತ್ತಿಲ್ಲ. ಸ್ಟಾಫ್ ಮೆಂಬರ್ ತೆಗೆದಿದ್ದೀರಿ, ಅವರನ್ನು ಯಾವ ರೀತಿ ಅಬ್ಸರಬ್ ಮಾಡುತ್ತೀರಿ. ಈಗಾಗಲೇ ಸರ್ಕಾರಿ ಸಂಬಳವನ್ನು ಮುನಿಸಿಪಾಲಿಟಿಯಲ್ಲಿರತಕ್ಕ ಸ್ಟಾಫ್ ಮೆಂಬರ್ಸ್‌ಗೆ ಕೊಟ್ಟಿದ್ದೀರಿ. ನಾಳೆ ಮಂಡಲ್ ಪಂಚಾಯತ್ ಅಥವಾ ಜಿಲ್ಲಾ ಪರಿಷತ್‌ನಲ್ಲಿ ಅವರನ್ನು ಅಬ್ಸರಬ್ ಮಾಡುತ್ತೀರೋ ? ಯಾವ ರೀತಿ ಮಾಡುತ್ತೀರಿ ? ಆದರೇನು ಪ್ರಾವಿಷನ್ ಮಾಡಿದ್ದೀರಿ ? ಎಂಬುದನ್ನು ತಿಳಿಸಬೇಕು One point I would like to bring to the notice of the Hon'ble Minister. I will sut read.—

> " Act of 1956 were in force at the time of enumeration of the population of SCs and STs as an entity by the Census of 1971. So, the relevent population figures available in this Census are those of the entities of SCs and STs subscribed by area restrictions these very SCs and STs who were outside the area restriction form the part of the general populat on and they were enumerated as such in Census of 1971. Consequently, their population should be added to the total population of the village or group of villages now termed as Mandal taluk, district and ultimately the whole state."

ಇನ್ನೊಮ್ಮೆ ನಿಮ್ಮ ಕಾನೂನು ತಜ್ಞರನ್ನು ಕರೆಯಿಸಿ ಇದಕ್ಕೆ ಏನಾದರೂ ಅವಕಾಶ ಮಾಡಲು ಸಾಧ್ಯವಿದೆಯೆ ? ಎಂಬುದನ್ನು ತಾವು ಪುನಃ ಪರಿಶೀಲನೆ ಮಾಡಬೇಕು. ಅಲ್ಲಿಯವರೆಗೂ ಒಂದು ತಿದ್ದುಪಡಿ ತರತಕ್ಕ ಅವಶ್ಯಕತೆ ಇಲ್ಲ. ತಾವು ಕನ್ಸಲ್ಟ್ ಮಾಡಿದ ಮೇಲೆ ತಿದ್ದುಪಡಿ ತರಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

† ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಉಪಾಧ್ಯಕ್ಷರೆ, ನಮ್ಮ ಮುಂದೆ ಮಂಡಿಸಿರತಕ್ಕ ಈ ತಿದ್ದುಪಡಿ ವಿಧೇಯಕದ ಬಗ್ಗೆ ನಿನ್ನೆ ಬಂದ ಅತ್ಯಂತ ಪ್ರಮುಖವಾದ ವಿಚಾರವನ್ನು ನಿನ್ನೆ ಮಾನ್ಯ ಖರ್ಗೆಯವರು ಹಾಗೂ ನಾನು ಸಾಕಷ್ಟು ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಮಂತ್ರಿಗಳಾದ ನಜೀರ್‌ಸಾಬರು ತಮ್ಮ ಅಭಿಪ್ರಾಯವನ್ನು ನಿನ್ನೆ ವ್ಯಕ್ತಮಾಡಿದ್ದಾರೆ. ನಿನ್ನೆಯಿಂದ ಇವತ್ತಿನವರೆಗೂ ೧೦-೧೨ ತಾಸು ಸಮಯ ಸಿಕ್ಕಿದೆ. ಆದ್ದರಿಂದ ಏನಾದರೂ ಅವರು ಆಲೋಚನೆ ಮಾಡಿರಬಹುದು ಎಂದು ಆಸೆಪಡುತ್ತೇನೆ. ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿರತಕ್ಕ ಜನಗಳಿಗೆ ಸಂಬಂಧಿಸಿದಂತೆ ಪ್ರಾತಿನಿಧ್ಯದಲ್ಲಿ ಕೊರತೆ ಹೇಗೆ ಉಂಟಾಗುತ್ತದೆ ಮತ್ತು ಏನು ಅನ್ಯಾಯವಾಗುತ್ತದೆ ಎಂಬ ವಿಷಯದಲ್ಲಿ ನಮಗೆ ಮತ್ತು ಅವರಿಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಅದರಲ್ಲಿ ರಾಜ್ಯಾಂಗಬದ್ಧ ಪ್ರಶ್ನೆಯಿರುವುದರಿಂದ ನಮ್ಮ ಹತ್ತಿರ ಅದನ್ನು ಸರಿಪಡಿಸುವುದಕ್ಕೆ ಅಧಿಕಾರ ಇಲ್ಲ ಎಂಬ ಮಾತನ್ನು ಅವರು ಹೇಳಿದ್ದಾರೆ, ಮೂಲ ಕಾನೂನಿನಲ್ಲಿ ಹಿಂದೆ ಇದ್ದಂಥ ಜನಗಣತಿಯನ್ನು ಪರಿಶೀಲಿಸಿ ಮಾಡಬೇಕೆಂದಿದೆ. ತಮ್ಮ ಬೇಡಿಕೆ ಚರ್ಚೆಯ ಕಾಲದಲ್ಲಿ ನಮ್ಮ ಹಿರಿಯ ಸದಸ್ಯರಾದ ಬಸವಲಿಂಗಪ್ಪನವರು ಒಂದು ವಿಷಯವನ್ನು ನಿಮ್ಮ ಗಮನಕ್ಕೆ ತಂದಾಗ ಅದನ್ನು ತಕ್ಷಣವೇ ಒಪ್ಪಿಕೊಂಡು ತಿದ್ದುಪಡಿ ಮಾಡಿದ್ದೇವೆ ಎಂದು ತಾವು ಹೇಳಿದಿರಿ. ನಾನು ರಾಜ್ಯಾಂಗದ ೮೨ ನೇ ವಿಧಿಯನ್ನು ನೋಡಿದ್ದೇನೆ. ಅದಕ್ಕೆ ಸಂಬಂಧಪಟ್ಟಿರತಕ್ಕ ವಿಧಿಯನ್ನು ನೋಡಿದ್ದೇನೆ. ಮೂಲಭೂತವಾಗಿ ಕಾನೂನು ಈ ಸದನದಲ್ಲಿ ಚರ್ಚೆಯಾದಾಗ ನಾನು ಸದಸ್ಯನಾಗಿರಲಿಲ್ಲ. ಆದ್ದರಿಂದ ಆಗಿನ ಕಾಲದ ಚರ್ಚೆಗಳು ಏನಾಯಿತು ಅದರ ಬಗ್ಗೆ ವಿಶೇಷವಾಗಿ ನನಗೆ ಗೊತ್ತಿಲ್ಲ. ಭಾರತ ದೇಶದ ಜನಸಂಖ್ಯೆ ಬೆಳೆಯುವುದಕ್ಕೆ ಪ್ರೋತ್ಸಾಹ ಇರಕೂಡದು ಎಂಬ ದೃಷ್ಟಿಯಿಂದ, ಅಂದರೆ ಪ್ರತಿಯೊಂದು ರಾಜ್ಯವೂ ಕೂಡ ತನ್ನ ಜನಸಂಖ್ಯೆಯನ್ನು ಜಾಸ್ತಿ ಮಾಡಿಕೊಂಡು ತನ್ನ ಪ್ರಾತಿನಿಧ್ಯವನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೆ ಅವಕಾಶ ಇರಬಾರದು ಎಂದು ೨೦೦೦ನೇ ಇಸವಿಯವರೆಗೆ ಲೋಕಸಭೆಗೆ ಮತ್ತು ರಾಜ್ಯ ವಿಧಾನಸಭೆಗೆ ಸಂಬಂಧಪಟ್ಟಂತೆ ೧೯೭೧ರ ಜನಗಣತಿ ಪ್ರಕಾರ ಮಾಡಬೇಕು, ಅದನ್ನೇ ಗಣನೆಯಲ್ಲಿಟ್ಟುಕೊಂಡು ಕ್ಷೇತ್ರ ವಿಂಗಡಣೆ ಮಾಡಬೇಕೆಂದು ರಾಜ್ಯಾಂಗದಲ್ಲಿ ತಿದ್ದುಪಡಿಯಾದ ವಿಧಿಗಳಿವೆ. ಇದು ನೀವು ಮಾಡುವ ಎಲ್ಲಾ ರೀತಿಯ ವ್ಯವಸ್ಥೆಗೆ, ಕ್ಷೇತ್ರಗಳಿಗೆ ಅನ್ವಯವಾಗುತ್ತದೆ ಎಂದು ಯಾರು ಹೇಳಿದ್ದಾರೆ? ನಾನು ಒಂದು ಪ್ರಶ್ನೆಯನ್ನು ನೇರವಾಗಿ ಮಂತ್ರಿಗಳಲ್ಲಿ ಕೇಳುವುದೇನೆಂದರೆ ಕಾನೂನು ಪ್ರಕಾರ ರಾಜ್ಯಾಂಗಬದ್ಧವಾಗಿ ೧೯೮೧ನೇ ಇಸವಿಯ ಜನಗಣತಿಯನ್ನು ಇಟ್ಟುಕೊಳ್ಳುವುದಕ್ಕೆ...

ಶ್ರೀ ಅಬ್ದುಲ್ ನಜೀರ್‌ಸಾಬ್.—ಯಾವ ವಿಧಿಯನ್ನು ಅನುಸರಿಸಿ ನೀವು ರಿಸರ್ವೇಷನ್ ಮಾಡುತ್ತೀರಿ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಯಾವುದೇ ವಿಧಿಯನ್ನು ಅನುಸರಿಸಿ ಅಲ್ಲ ಮಾಡುವುದು. The Constituional principle you have followed and a dopted into your act is important and it is not as if the Constitution directs you to give a particular type of representation in your Mandal Panchayat arrangement. There is a world of difference ಅದಲ್ಲ. ರಾಜ್ಯಾಂಗದಲ್ಲಿ ಇಂಥಂಥದ್ದರಲ್ಲಿ ಹೀಗೆ ಹೀಗೆ ಮಾಡಬೇಕು, ಮುನಿಸಿಪಾಲಿಟಿಯಲ್ಲಿ ಈ ರೀತಿ ಕ್ಷೇತ್ರ ವಿಂಗಡಣೆ ಮಾಡಬೇಕು, ತಾಲ್ಲೂಕು ಅಭಿವೃದ್ಧಿ ಮಂಡಳಿಯಲ್ಲಿ ಹೀಗೆ ಮಾಡಬೇಕು ಎಂದು ಏನೂ ಇಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಕ್ಷೇತ್ರ ವಿಂಗಡಣೆ ಅಲ್ಲ ನಾನು ಹೇಳಿದ್ದುದು. ಅಸ್ಪೃಶ್ಯ ಜನಾಂಗಕ್ಕೆ ಇಷ್ಟು ರಿಸರ್ವೇಷನ್ ಕೊಡಬೇಕೆಂದು ರಾಜ್ಯಾಂಗ ವಿಧಿಯಲ್ಲಿ ಇದೆ. ಅದಕ್ಕಿಂತ ಕಡಿಮೆ ಮಾಡುವುದಕ್ಕೆ ಬರುವುದಿಲ್ಲ. ಆದರೆ ಜಾಸ್ತಿ ಮಾಡಬಹುದು. ರಾಜ್ಯಾಂಗದ ವಿಧಿ ಅನುಗುಣವಾಗಿ ಎಲ್ಲಾ ಕಡೆ ರಿಸರ್ವೇಷನ್ ಮಾಡುತ್ತೀರಿ ಅದು ಬಿಟ್ಟು ಏನು ಮಾಡುತ್ತೀರಿ ?

ಶ್ರೀ ಕೆ. ಎಚ್. ಶ್ರೀನಿವಾಸ್.—ದಯವಿಟ್ಟು ನಾನು ಹೇಳುವವರೆಗೆ ಕೇಳಿ. ಕಡಿಮೆ ಮಾಡುವ ಜಾಸ್ತಿ ಮಾಡುವ ವಿಚಾರವನ್ನೇ ನಾನು ಹೇಳುತ್ತಿಲ್ಲ. ೧೯೭೧ನೇ ಇಸವಿ ಜನಗಣತಿ ನಿಮ್ಮ ಮೇಲೆ

ನೀವು ಏನು ಹೇರಿಕೊಂಡಿದ್ದೀರಿ ಅದನ್ನು ಹೇರಿಕೊಳ್ಳುವ ಅನಿವಾರ್ಯತೆ ಏನಿದೆ ಎಂದು ಕೇಳುತ್ತೇನೆ. ರಾಜ್ಯಾಂಗದ ವಿಧಿಗಳು ಶಾಸನಸಭೆ ಮತ್ತು ಲೋಕಸಭೆ ಕ್ಷೇತ್ರ ವಿಂಗಡಣೆಗೆ ಸಂಬಂಧಪಟ್ಟಿರತಕ್ಕದ್ದೇ ಹೊರತು ನೀವು ಏನೇನು ಬೇರೆ ಬೇರೆ ವ್ಯವಸ್ಥೆ ಮಾಡಿಕೊಳ್ಳುತ್ತೀರಿ ಅದಕ್ಕೆಲ್ಲಾ ಸಂಬಂಧಪಟ್ಟಿರುವುದಿಲ್ಲ ಮಂಡಲ್ ಪಂಚಾಯತ್ ಇರಬಹುದು, ಗ್ರೂಪ್ ಪಂಚಾಯತ್ ಇರಬಹುದು, ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಇರಬಹುದು, ಜಿಲ್ಲಾಪರಿಷತ್ ಇರಬಹುದು, ನಗರಸಭೆ ಮತ್ತು ಪುರಸಭೆ ಇರಬಹುದು ಎಲ್ಲದಕ್ಕೂ ಒಂದೇ ಆಧಾರ ಇಲ್ಲ. ಟೌನ್ ಪಂಚಾಯತ್ ತೆಗೆದು ಮಂಡಲ್ ಪಂಚಾಯತ್ ಮಾಡುತ್ತಿದ್ದೀರಿ. ಇದಕ್ಕೆಲ್ಲಾ ೧೯೭೧ನೇ ಇಸವಿ ಸೆನ್ಸಸ್ ಇಟ್ಟುಕೊಳ್ಳಿ ಎಂದು ರಾಜ್ಯಾಂಗದಲ್ಲಿ ಹೇಳಿಲ್ಲ. ಮಾನ್ಯ ಬಸವಲಿಂಗಪ್ಪನವರು ಹೇಳಿದರು ಎಂದು ತಕ್ಷಣ ಒಪ್ಪಿಕೊಂಡೆವು ಎಂದು ಹೇಳುತ್ತೀರಿ. ನಿಮ್ಮ ಕಾನೂನು ಸಲಹೆ ಆ ರೀತಿ ಇದೆಯೆ ? ೧೯೮೧ರ ಜನಗಣತಿ ಪ್ರಕಾರ ಮಾಡುವುದಕ್ಕೆ ರಾಜ್ಯಾಂಗದ ತೊಂದರೆ ಇದೆಯೆ? ೧೯೭೧ರ ಜನಗಣತಿ ಪ್ರಕಾರ ಮಾಡಬೇಕು ಅದನ್ನು ಆಧಾರವಾಗಿ ಇಟ್ಟುಕೊಳ್ಳಬೇಕು ಎಂಬುದು ಕಾನ್‌ಸ್ಟಿಟ್ಯೂಷನಲ್ ಪ್ರಿನ್ಸಿಪಲ್ ಅಲ್ಲ. ಒಂದು ಉದ್ದೇಶದಿಂದ, ಜನಸಂಖ್ಯೆ ದೃಷ್ಟಿಯಿಂದ ಅದನ್ನು ಮಾಡಿದರು, ಅದು ಒಂದು ಹಂತಕ್ಕೆ ಸೀಮಿತವಾಗಿ ಮಾಡಿದ್ದಾರೆ. ರಾಜ್ಯಾಂಗದಲ್ಲಿ ಹೇಳದೇ ಇರತಕ್ಕ ಬೇಕಾದಷ್ಟು ವ್ಯವಸ್ಥೆಗಳನ್ನು ನೀವು ಮಾಡುತ್ತೀರಿ. ಮಹಿಳೆಯರಿಗೆ ಸ್ಥಾನ ಮೀಸಲು ಮಾಡಿದ್ದೀರಿ. ಅದು ರಾಜ್ಯಾಂಗದಲ್ಲಿದೆಯೆ ? ಹಾಗೆಯೇ ಇಲ್ಲಿ ಪ್ರಶ್ನೆ ಏನಿದೆ ಎಂದರೆ ಈ ರಾಜ್ಯಾಂಗದ ವಿಧಿಗೂ ನಿಮ್ಮ ಕಾನೂನಿಗೂ ನೇರವಾದ ಸಂಬಂಧ ಇಲ್ಲ. ಪ್ರಾತಿನಿಧ್ಯ ಕೊಡಬೇಕಾದರೆ ಯಾವುದಾದರೂ ಪ್ರಿನ್ಸಿಪಲ್ ಬೇಕು ಎಂಬ ದೃಷ್ಟಿಯಿಂದ ರಾಜ್ಯಾಂಗದಲ್ಲಿ ಒಂದು ಪ್ರಿನ್ಸಿಪಲ್ ಇರುವುದನ್ನು ತೆಗೆದುಕೊಂಡಿರಬಹುದು. ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಪ್ರಾತಿನಿಧ್ಯ ಕೊಡಬೇಕಾದರೆ ಅವರ ಜನಸಂಖ್ಯೆ ಎಷ್ಟಿದೆ ಆ ಜನಸಂಖ್ಯೆಗೂ ಒಟ್ಟಿನ ಜನಸಂಖ್ಯೆಗೂ ಯಾವ ರೇಷಿಯೋ ಬರುತ್ತದೆಯೋ ಅದೇ ರೇಷಿಯೋವಿನಲ್ಲಿ ಕೊಡಬೇಕೆಂದು ಕಾನ್‌ಸ್ಟಿಟ್ಯೂಷನಲ್ ಪ್ರಿನ್ಸಿಪಲ್‌ನಲ್ಲಿದೆ. ಅದನ್ನು ನಿಮ್ಮ ಕಾನೂನಿನೊಳಗೆ ಬರೆದುಕೊಂಡಿದ್ದೀರಿ. ಏಕೆಂದರೆ ಯಾವುದಾದರೂ ಒಂದು ಪ್ರಿನ್ಸಿಪಲ್ ಬೇಕಾಗಿತ್ತು. ಅದು ತಪ್ಪಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಶ್ರೀನಿವಾಸ ಅವರಿಗೆ ಅದು ಕಾನ್‌ಸ್ಟಿಟ್ಯೂಷನಲ್ ಪ್ರಿನ್ಸಿಪಲ್ The same principle flows from the Constitution

SRI K. H. SRINIVAS.—If you can correct me with some sense, I would like to discuss this with your Law officers ನಾನು ಹೇಳುತ್ತಿರತಕ್ಕದ್ದು ಕಾನ್‌ಸ್ಟಿಟ್ಯೂಷನ್‌ನಲ್ಲಿ ಬರೆದಿರತಕ್ಕ ಎಲ್ಲಾ ಪ್ರಿನ್ಸಿಪಲ್ ಬಗ್ಗೆ ಅಲ್ಲ. On exigencies also ಬೇಕಾದಷ್ಟು ಬರವಣಿಗೆ ಇದೆ, ಅದರಲ್ಲಿ ಬರೆದಿದ್ದೆಲ್ಲಾ ಪ್ರಿನ್ಸಿಪಲ್ ಎಂದು ತಿಳಿದುಕೊಳ್ಳುವುದಕ್ಕೆ ಎಲ್ಲಾ ಒಂದೇ ಮಂತ್ರ ಆಗುವುದಿಲ್ಲ. ಅಕಸ್ಮಾತ್ ಬೇರೆ ಪ್ರಿನ್ಸಿಪಲ್ ಇಟ್ಟುಕೊಂಡಿದ್ದರೂ ತಪ್ಪಾಗುತ್ತಾ ಇರಲಿಲ್ಲ. ಆದರೂ ಏನು ಮಾಡಿದ್ದೀರೆಂದರೆ ರಾಜ್ಯಾಂಗದಲ್ಲಿರತಕ್ಕ ಒಂದು ಸೂತ್ರವನ್ನು ಈ ಕಾನೂನಿನಲ್ಲಿ ಕೂಡ ಅಳವಡಿಸಿಕೊಂಡಿದ್ದೀರಿ. ಅದರ ಬಗ್ಗೆ ಅಭ್ಯಂತರ ಇಲ್ಲ. ಅದು ಪ್ರಿನ್ಸಿಪಲ್ ನಿಜ ಆ ಪ್ರಿನ್ಸಿಪಲ್ ತೆಗೆದುಕೊಂಡಿರಿ ಎಂದು ರಾಜ್ಯಾಂಗದ ಆ ಪೇಜ್‌ನಲ್ಲಿ ಏನೇನು ಬರೆದಿದೆಯೋ ಅದೆಲ್ಲಾ ನಿಮ್ಮ ತಲೆ ಮೇಲಿದೆ ಎಂದು ಭಯಪಡಬೇಕಾದ ಅಗತ್ಯ ಇಲ್ಲ. ೧೯೭೧ನೇ ಜನಗಣತಿ ತೆಗೆದುಕೊಳ್ಳದೆ ೧೯೮೧ನೇ ಜನಗಣತಿ ಆಧಾರದ ಮೇಲೆ ಮಂಡಲಗಳನ್ನು ಮತ್ತು ಜಿಲ್ಲಾ ಪರಿಷತ್ ಮಾಡುವುದಕ್ಕೆ ರಾಜ್ಯಾಂಗದ ವಿರೋಧ ಬರುವುದಿಲ್ಲ. ಆ ರೀತಿ ಮಾಡಿದರೂ ನಿನ್ನೆ ಸುದೀರ್ಘವಾಗಿ ಚರ್ಚೆ ಮಾಡಿದಂತೆ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಪ್ರಾತಿನಿಧ್ಯವನ್ನು ಸಮರ್ಪಕವಾಗಿ ಕೊಡುವುದಕ್ಕೆ ಸಾಧ್ಯವಿರುವುದರಿಂದ ಆ ಬಗ್ಗೆ ಯೋಚನೆ ಮಾಡಬೇಕು. ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಿ. ನಮ್ಮನ್ನೂ ಬೇಕಾದರೆ ಕರೆಯಿರಿ. In your wisdom, you wanted to be on a solid substratum. You call your Law Secretary ahd if also possible, you call your Advocate General and convince us. ಅದು ಬಿಟ್ಟು ಅದು ಅನಿವಾರ್ಯ, ರಾಜ್ಯಾಂಗದ ಪ್ರಕಾರ ಮಾಡಲೇಬೇಕು ಎಂದು ಹೇಳಿದರೆ, ರಾಜ್ಯಾಂಗಕ್ಕೆ ತದ್ವಿರುದ್ಧವಾಗಿ ಮಾಡಿ ಎಂದು ನಾವು ಹೇಳುವುದಕ್ಕೆ ಯಾರಿಲ್ಲ, ನಾವೂ ರಾಜ್ಯಾಂಗವನ್ನು ಸಾಕಷ್ಟು ಓದಿದ್ದೇವೆ. ಸಾಕಷ್ಟು ವಿಧಿಯನ್ನು ಓದಿ ತಿಳಿದುಕೊಂಡಿದ್ದೇವೆ. ಅದನ್ನು ಓದಿಕೊಳ್ಳದೇ ಹೇಳುತ್ತಿಲ್ಲ. ನಾನು ತಿಳಿದುಕೊಂಡ ಮಟ್ಟಿಗೆ ರಾಜ್ಯಾಂಗ ಈ ವಿಚಾರದಲ್ಲಿ ಯಾವುದೇ ರೀತಿಯಲ್ಲಿ ನಿಮಗೆ ಬಾಧಕವಾಗುವುದಿಲ್ಲ.

ರಾಜ್ಯಾಂಗದಲ್ಲಿ ಆ ಪೇಜ್‌ನಲ್ಲಿರತಕ್ಕ ಪ್ರಿನ್ಸಿಪಲ್ ತೆಗೆದುಕೊಂಡಿರುವುದರಿಂದ ಇಡೀ ಪೇಜನ್ನೇ ಕಾಪಿ ಮಾಡಬೇಕೆಂದು ತಿಳಿದುಕೊಂಡು ಗಾಬರಿಯಿಂದ ಇದನ್ನು ಮಾಡಿದ್ದೀರೇ ವಿನಹ ಸಾಕಷ್ಟು ಯೋಚನೆ ಮಾಡಿ ಮಾಡಿರತಕ್ಕದ್ದಲ್ಲ.

ಮೊದಲು ಏನು ಕಾನೂನು ಮಾಡಿದ್ದರು, ಏನು ಸಲಹೆ ಮಾಡಿದ್ದರು ಆ ಸಲಹೆ ಸರಿಯಾಗಿಯೇ ಇತ್ತು. ಅದು ತಪ್ಪಿರಲಿಲ್ಲವೆಂದು ನಾನು ಹೇಳುತ್ತೇನೆ. ಆ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಹೇಳಿದ ಕೂಡಲೇ ಇವರಿಗೆ ಗಾಬರಿ ಆಯಿತು. ಮಾನ್ಯ ನಜೀರ್ ಸಾಬ್ ಅವರಿಗೆ ಇದು ಅವರ ಶಿಶು ಎನ್ನುವ ಭಾವನೆ ಬಂದಿದೆ. ಅದು ಚೆನ್ನಾಗಿ ಬೆಳೆಯಬೇಕು ಎಂದು ಹೇಳಿ ಏನಾದರೂ ಒಂದು ಆದರೆ ತೀರಾ ಗಾಬರಿಯಾಗಿ ಯಾರು ಏನು ಹೇಳುತ್ತಾರೆ ಅದನ್ನೆಲ್ಲಾ ಅದಕ್ಕೆ ಮಾಡಿ ಅದನ್ನು ವಿಪರೀತ ಮಾಡಿ ಹಾಳುಮಾಡುವ ಹಾಗೆ ಇದನ್ನು ಮಾಡಬಾರದು. ಈ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಹೇಳಿದ ಕೂಡಲೇ ತಕ್ಷಣ ಆರ್ಡಿನೆನ್ಸನ್ನು ಹೊರಡಿಸುವ ಅಗತ್ಯ ಇರಲಿಲ್ಲ. ಈ ಬಗ್ಗೆ ಈಗಲೂ ವಿಮರ್ಶೆ ಮಾಡುವುದಕ್ಕೆ ಅವಕಾಶ ಇದೆ. If I am convinced by the legal experts that Constitutionally you are obliged to do this only and nothing else ; then I am convinced. ಹಾಗೆ ಆಗಿಲ್ಲ. ದಯವಿಟ್ಟು ಇದನ್ನು ಪುನರ್ವಿಮರ್ಶೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಉಳಿದಿರತಕ್ಕ ವಿಧಿಗಳನ್ನು ಚರ್ಚೆ ಮಾಡುವುದು ಒಂದು ರೀತಿಯ ಮರಣೋತ್ತರ ಪರೀಕ್ಷೆ ಮಾಡಿದಹಾಗೆ, ಆದರಿಂದ ಸಾರ್ಥಕತೆ ಇಲ್ಲ. ಬೇಕಾದ ಕಾಲಕ್ಕೆ ಆರ್ಡಿನೆನ್ಸ್ ಹೊರಡಿಸಿ ಏನೇನು ಮಾಡಬೇಕೋ ಬಿಡಬೇಕೋ ಅದನ್ನು ಮಾಡಿಬಿಟ್ಟಿದ್ದೀರಿ. ಪ್ರಿನ್ಸಿಪಲ್ ಎಂದು ಹೇಳಿ ಪ್ರಾವಿಸೋದಲ್ಲಿ ಮೇಲೆ ಏನೋ ಬರೆದಿರಿ. ಒಂದಲ್ಲ, ಎರಡಲ್ಲ ಮೂರು ಪ್ರಾವಿಸೋಗಳನ್ನು ಮಾಡಿಕೊಂಡಿದ್ದೀರಿ. ಎರಡನೇಯ ಪೇಜ್‌ನಲ್ಲಿ

> "Provided that the Government may by notification order that an area with a population of not less than four thousand may be so declared as a mandal in such areas of the district of Belgaum, Chikkamagalur, Dakshina Kannada, Dharwar, Hassan, Kodagu, Shimoga and Uttar Kannada as may be notified by the Government."

ತಾತ್ವಿಕವಾಗಿ ಅಲ್ಲಿ ಜನಸಂಖ್ಯೆ ಕಡಿಮೆ ಇದ್ದು ಭೂಮಿಯ ವಿಸ್ತಾರ ಜಾಸ್ತಿ ಇದ್ದರೆ ಆ ದೃಷ್ಟಿಯಿಂದ ೮ ಸಾವಿರಕ್ಕಿಂತ ಕಡಿಮೆ ಇದ್ದರೂ ಕೂಡಾ, ೪ ಸಾವಿರ ಇದ್ದರೆ ಮಂಡಲ್ ಆಗಬಹುದೆಂದು ತಾವು ಇದನ್ನು ಮಾಡಿದ್ದೀರಿ ಎಂದು ನಮ್ಮ ಭಾವನೆ. ನಾವು ನಿಮ್ಮ ಜೊತೆ ಚರ್ಚೆ ಮಾಡಿದಾಗ ಹಾಗೆ ತಾವು ಹೇಳಿದಿರಿ. ಈ ಜಿಲ್ಲೆಗಳ ಯಾವ ಭಾಗದಲ್ಲಿ ಮಾಡಬೇಕು, ಬಿಡಬೇಕು ಎನ್ನುವ ಬಗ್ಗೆ ತಾವೇ ಮಾಡಬೇಕು, ಡಿ. ಸಿ. ಯವರು ಮಾಡುವಹಾಗೆ ಇಲ್ಲ. ಈ ಬಗ್ಗೆ ಡಿ. ಸಿ. ಯವರನ್ನು ಕೇಳಿದಾಗ, ತಾವು ಸರ್ಕಾರಕ್ಕೆ ಕೇಳಿ ಎಂದು ಹೇಳಿದರು. ನಾನು ಈ ಬಗ್ಗೆ ಜಿಲ್ಲಾಧಿಕಾರಿಯವರನ್ನೂ ಕೇಳಿದೆ ಹಾಗೂ ಸರ್ಕಾರವನ್ನು ಕೇಳಿದೆ. ಆದರೆ ನಾನು ಕೇಳಿದ್ದುದು ನಿರರ್ಥಕವಾಯಿತು. ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ ೨ ಭಾಗದಲ್ಲಿ ಒಂದು ಭಾಗ ತೀರ್ಥಹಳ್ಳಿ ತಾಲ್ಲೂಕಿಗೆ ಬರುತ್ತದೆ, ಇನ್ನೊಂದು ಭಾಗ ಎನ್. ಆರ್. ಪುರಕ್ಕೆ ಬರುತ್ತದೆ. ಮಲೆನಾಡಿನ ಸ್ವರೂಪವೇ ಇರುವುದರಿಂದ ಹಾಗೂ ಜನಸಂಖ್ಯೆ ಕಡಿಮೆ ಇರುವುದರಿಂದ ಸುಮಾರು ಆರು ಸಾವಿರ ಪಾಪ್ಯುಲೇಷನ್‌ಗೆ ಒಂದು ಮಂಡಲ್ ಮಾಡಬೇಕಾಗುತ್ತದೆ. ಆದುದರಿಂದ ೨ ಮಂಡಲ ಮಾಡಿ ಎಂದು ಎಲ್ಲಾ ವಿವರವನ್ನು ತಮಗೂ ಕೊಟ್ಟೆ ಹಾಗೂ ಜಿಲ್ಲಾಧಿಕಾರಿಗಳ ಕೈಗೂ ಕೊಟ್ಟೆ. ತಾವು ಕೂಡಾ ಆಗಬಹುದು ಎಂದು ಹೇಳಿದಿರಿ, ಜಿಲ್ಲಾಧಿಕಾರಿಗಳೂ ಕೂಡಾ ಇದು ಸರಿಯಾಗಿದೆ ಎಂದು ಹೇಳಿದರು. ಆದರೆ ಈಗ ಏನನ್ನೂ ಮಾಡಿಲ್ಲ. ಕೊನೆಗೆ ೮-೯ ಸಾವಿರ ಸೇರಿಸಿ ಅಲ್ಲಿಂದ ಇಲ್ಲಿಯವರೆಗೆ ಒಂದೇ ಮಂಡಲವನ್ನು ಮಾಡಿದ್ದೀರಿ. ಆಯಿತು. ಇನ್ನೊಂದು ಕಾಲಂ ಮಾಡಿದ್ದೀರಿ,

> "Provided also that the Deputy Commissioner may, afte previous publication, with the permission of the Government, declare any area comprising a village or group of villages

having a population of either less than eight thousand or more than twelve thousand to be a mandal."

ಇದು ಎರಡೂ ಏಕೆ ಸ್ವಾಮಿ ? ಇವೊತ್ತು ಒಂದೇ ಸಾಕಾಗಿತ್ತು. ಒಬ್ಬ ದೊಡ್ಡ ವಿಜ್ಞಾನಿ ಎಂದರೆ ಐನ್‌ಸ್ಟೀನ್, ದೊಡ್ಡ ಬೆಕ್ಕು ಹೋಗುವುದಕ್ಕೆ ಒಂದು ದೊಡ್ಡ ಕಿಂಡಿ ಹಾಗೂ ಅದರ ಮರಿ ಹೋಗುವುದಕ್ಕೆ ಅದರ ಪಕ್ಕದಲ್ಲಿ ಒಂದು ಸಣ್ಣ ಕಿಂಡಿಯನ್ನು ಮಾಡಿದಂತೆ ಈ ಕಾನೂನು ಆಗಿದೆ. ಅಂತಹ ದೊಡ್ಡ ವಿಜ್ಞಾನಿ ಆ ರೀತಿ ಮಾಡಿದ ಮೇಲೆ ಮಾನ್ಯ ನಜೀರ್ ಸಾಬ್ ಅವರು ಈ ರೀತಿ ಮಾಡಿದ್ದರಲ್ಲಿ ತಪ್ಪು ಇಲ್ಲ. ೮ ಸಾವಿರಕ್ಕಿಂತ ಜನಸಂಖ್ಯೆ ಕಡಿಮೆ ಇದ್ದದ್ದು, ೧೨ ಸಾವಿರಕ್ಕಿಂತ ಮೇಲ್ಪಟ್ಟು ಎಷ್ಟೇ ಇದ್ದರೂ ಮಂಡಲ ಮಾಡುವುದಕ್ಕೆ ಪವರ್ ಇದ್ದ ಮೇಲೆ ೪ ಸಾವಿರಕ್ಕೂ ಮಾಡಬೇಕೆಂದು ಏಕೆ ಮಾಡಬೇಕಾಗಿತ್ತು ? It is redundent·

ಶ್ರೀ ಅಬ್ದುಲ್ ನಜೀರ್ ಸಾಬ್.—ಮಲೆನಾಡಿಗೆ ಅದನ್ನು...

ಶ್ರೀ ಕೆ. ಎಚ್. ಶ್ರೀನಿವಾಸ್.—ಹಾಗಾದರೆ ಮಲೆನಾಡಿಗೆ ಅದು ಅಪ್ಲೈ ಆಗುವುದಿಲ್ಲವೇ ? ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ೮ ಸಾವಿರಕ್ಕಿಂತ ಕಡಿಮೆ ಎಂದರೆ, ಅದು ೧,೦೦೦ ಇರಲಿ, ೨ ಸಾವಿರ ಇರಲಿ, ಆ ಬಗ್ಗೆ ಕಾನೂನು ಇಟ್ಟುಕೊಂಡು ಹೊಸದಾಗಿ ೪ ಸಾವಿರ ಜನಕ್ಕೆ ಮೇಲ್ಪಟ್ಟು ಎಂದು ಮಾಡುವುದು ಏಕೆ ? ಮಲೆನಾಡಿನಲ್ಲಿ ೪ ಸಾವಿರಕ್ಕೆ ಮಂಡಲ ಪಂಚಾಯತ್ ಮಾಡಿ ಬಯಲು ಸೀಮೆಯಲ್ಲಿ ೧ ಸಾವಿರಕ್ಕೆ ಮಾಡಬಹುದೇ ? Will it not affect the principle on which you have drafted this proviso ? ಮಲೆನಾಡಿಗೆ ಸಂಬಂಧಪಟ್ಟ ಹಾಗೆ ಇದನ್ನು ಮಾಡಬೇಕೆಂದು ಮಾಡಿ. ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಇದಕ್ಕಿಂತಲೂ ವ್ಯಾಪಕವಾಗಿ ಹೇಗೆ ಮಾಡಬೇಕೋ ಹಾಗೆ ಮಾಡುವುದಕ್ಕಾಗಿ ಪವರ್ ತೆಗೆದುಕೊಂಡಿರುವಾಗ ಇದು ಏಕೆ ಬೇಕು ? ಇವೆರಡನ್ನೂ ಸಮನ್ವಯ ಮಾಡುತ್ತೀರಾ ? ಇದರಿಂದ ನನಗೆ ಬಹಳ ಆಶ್ಚರ್ಯವಾಗುತ್ತದೆ. ಕಳೆದ ವಿಧಾನಸಭೆಯಲ್ಲಿ ತಾವು ಈ ಬಗ್ಗೆ ಒಂದು ಮಾತನ್ನು ಹೇಳಿದಿರಿ. ಎಲ್ಲಾ ಶಾಸನಸಭೆಯ ಸದಸ್ಯರನ್ನು, ಕೊನೆಗೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಕ್ಷೇತ್ರ ವಿಂಗಡನೆಯನ್ನು ಮಾಡುತ್ತೇವೆಂದು ಹೇಳಿದಿರಿ. ನಾನೂ ಕೂಡಾ ಆ ಬಗ್ಗೆ ವಿಶ್ವಾಸವನ್ನು ಇಟ್ಟೆ. ಆದರೆ ಏನಾಯಿತು ಎಂದರೆ, ಒಂದರಮೇಲೊಂದರಂತೆ ತಮ್ಮಿಂದ ಬಂದ ನಿದರ್ಶನಗಳು, ಏತನ್ಮಧ್ಯೆ ಕಾನೂನಿನಲ್ಲಿ ಆದ ಬದಲಾವಣೆಗಳಿಂದಾಗಿ ಜಿಲ್ಲಾಧಿಕಾರಿಗಳಿಗೆ ಯಾವ ರೀತಿ ಮಾಡಬೇಕೆನ್ನುವುದು ಬಗೆಹರಿಯದೇ ಕೊನೆಗೆ ಏನು ಅವರಿಗೆ ತೋಚಿತೋ ಅದನ್ನು ಹಾಗೂ ಅಲ್ಲಿಯ ಸ್ಥಳೀಯರಾದ ಪ್ರಭಲ ಜನರು ಹೇಳಿದಹಾಗೆ ಕ್ಷೇತ್ರ ವಿಂಗಡನೆ ಮಾಡಿದರೇ ಹೊರತು ಸಮರ್ಪಕವಾಗಿ ಇಲ್ಲಿ ಕ್ಷೇತ್ರ ವಿಂಗಡಣೆ ಆಗಿಲ್ಲ. ಈ ವಿಂಗಡನೆಯಲ್ಲಿ ಆಡಳಿತ ಪಕ್ಷದಲ್ಲೇ ಎಲ್ಲಾ ಸದಸ್ಯರಿಗೂ ಇದೆಲ್ಲಾ ಸಮರ್ಪಕವಾಗಿ ಆಗಿದೆ ಎಂದು ಎನಿಸಿದರೆ ಸಂತೋಷ. ನಾಳೆಯ ದಿವಸ ಈ ಮಂಡಲಗಳು ಮುಂದೆಯನ್ನು ಹೊಡೆದುಕೊಳ್ಳುವುದು ಆಗಬಾರದು. ಹಿಂದೆ ನಾವು ಸೊಸೈಟಿಗಳನ್ನು ಅಮಾಲ್ಗಮೇಟ್ ಮಾಡಿದಾಗ, ಕೆಟ್ಟ ಸೊಸೈಟಿಗಳು ಒಳ್ಳೆಯವು ಆಗುವುದರ ಬದಲು ಆ ಕಾರಣದಿಂದ ಒಳ್ಳೆಯ ಸೊಸೈಟಿಗಳೂ ಕೆಟ್ಟ ಸೊಸೈಟಿಗಳಾದವು. ಈ ಪರಿಣಾಮವಾಗಿ ಒಳ್ಳೆಯ ಸೊಸೈಟಿಗಳೂ ಡೀಫಾಲ್ಟ್ ಆಗುವುದಕ್ಕೆ ಶುರುವಾಯಿತು. ಮಂಡಲಗಳೂ ಅಷ್ಟೇ. ಒಂದೊಂದು ಹಳ್ಳಿಯೂ ಜೀವಂತ ಘಟಕ ಇದ್ದ ಹಾಗೆ. ಈ ಘಟಕಗಳನ್ನು ಒಟ್ಟುಗೂಡಿಸಿ ಒಂದು ಮಂಡಲ ಮಾಡುವುದರಿಂದ ಅದೂ ಕೂಡಾ ಜೀವಂತ ಘಟಕ ಆಗುತ್ತದೆ. ಆದರೆ. ಒಂದು ಹಳ್ಳಿಯನ್ನು ಕಂಡರೆ ಇನ್ನೊಂದು ಹಳ್ಳಿಗೆ ಆಗದೆ ಇರುವಾಗ ಅಂತಹ ನಾಲ್ಕು ಹಳ್ಳಿಗಳನ್ನು ಸೇರಿಸಿ ಒಂದು ಮಂಡಲ ಮಾಡಿದರೆ ಆ ಮಂಡಲ ಮಂಡೆ ಹೊಡೆದುಕೊಳ್ಳದೇ ಬೇರೆ ದಾರಿ ಇಲ್ಲ. ಇಂತಹ ಘಟಕಗಳು ಅಭಿವೃದ್ಧಿಯಾಗುವುದಿಲ್ಲ. ದೀರ್ಘ ಕಾಲ ನಡೆಯಬೇಕಾದ ವ್ಯವಸ್ಥೆ ಇದು ಆಗಿರುವುದರಿಂದ ಮಂಡಲಗಳನ್ನು ಮಾಡುವಾಗ ಬಹಳ ಆಲೋಚನೆ ಮಾಡಿ ಮಾಡಬೇಕಾಗುತ್ತದೆ. ಈ ಬಗ್ಗೆ ಕನ್‌ಸಲ್ಟ್ ಮಾಡುವುದಕ್ಕೆ ನಮ್ಮನ್ನು ಒಂದು ಸಾರಿ ಕರೆಯಿಸಿದ್ದರು ನಮ್ಮನ್ನು ಎಷ್ಟು ಸಾರಿ ಕರೆಸಿದ್ದೇವೆ ಎನ್ನುವ ಬಗ್ಗೆ ತಮಗೆ ಡಿ. ಸಿ. ಯವರು ನಮಗೆ ಕಳುಹಿಸಿದ ನೋಟೀಸ್ ತೋರಿಸಬಹುದು. ನಮ್ಮನ್ನು ಅವರು ಕರೆಯಿಸಿ ನಮಗೆ ಹಳ್ಳಿಗಳ ಲಿಸ್ಟ್ ಕೊಡಿ ಎಂದು ಒಂದು ಲಿಸ್ಟ್ ಕೊಟ್ಟರು. ಅದರಲ್ಲಿ ನಾವು ಮಂಡಲ ಹೆಡ್ ಕ್ವಾರ್ಟರ್ಸ್ ಯಾವುದು ಎಂದು ನಾವು ಹೇಳುವ ಹಾಗೆ ಇಲ್ಲ. ಬರೀ

ಗ್ರೂಪ್‌ನ್ನು ಹೇಳಬೇಕೆಂದು ಹೇಳಿದರು. ಒಂದು ವೃತ್ತವನ್ನು ನಾವು ಎಳೆಯಬೇಕು ಎಂದರೆ ಅದಕ್ಕೆ ಸೆಂಟರ್ ಪಾಯಿಂಟ್ ಯಾವುದು ಎಂದು ನಮಗೆ ಗೊತ್ತಾಗಬೇಕಲ್ಲವೇ ? ಹಳ್ಳಿಗಳ ಸಮೂಹಕ್ಕೆ ಸೆಂಟರ್ ಯಾವುದು ಎಂದು ತಿಳಿದುಕೊಳ್ಳದೇ, ಅದನ್ನು ನಿರ್ಣಯ ಮಾಡದೇ ಸುಮ್ಮನೇ ಒಂದು ವೃತ್ತವನ್ನು ಎಳೆಯುವುದು ಹೇಗೆ ಸಾಧ್ಯ ? ಒಂದು ಕೇಂದ್ರವನ್ನು ಮೊದಲೇ ನಿಗದಿ ಮಾಡದೇ ಗ್ರೂಪ್ ಆಫ್ ವಿಲೇಜಸ್‌ನ್ನು ಹೆಣೆಯುವುದಕ್ಕೆ ಹೇಗೆ ಸಾಧ್ಯವಿದೆ ? You connot ask us to think in a vacuum. ಇದು ಇಲ್ಲದೇ ಮಂಡಲ ಎಂದು ಹೇಗೆ ಹೇಳುವುದು ? ಇಂತಹದ್ದು ಕೇಂದ್ರ ಎಂದು ಹೇಳಿದರೆ, ಇದು ಸರಿಯಿಲ್ಲ ಇದು ಮಾಡಿ ಎಂದು ಹೇಳಬಹುದು. ಇವೊತ್ತು ಕೇಂದ್ರವನ್ನು ನಿರ್ಧಾರ ಮಾಡುವುದಕ್ಕೆ ನಮಗೆ ಅಧಿಕಾರ ಇಲ್ಲ. ಇದನ್ನು ಸರ್ಕಾರ ನಿರ್ಧಾರ ಮಾಡುತ್ತದೆ. ಬರೀ ಗ್ರೂಫ್ ಆಫ್ ವಿಲೇಜಸ್‌ನ್ನು ಮಾಡಿ ಎಂದರೆ ಹೇಗೆ ಮಾಡುವುದು ? ನಡುವೆ ಒಂದು ಕೇಂದ್ರ ಬಿಂದುವನ್ನು ಮನಸ್ಸಿನಲ್ಲಿ ಕಲ್ಪನೆ ಮಾಡದೇ ಹೇಗೆ ಹೇಳುವುದಕ್ಕೆ ಸಾಧ್ಯ ? ಆಗ ನಾವು ನಮ್ಮ ಅಸಹಾಯಕತೆಯನ್ನು ನಾವು ಹೇಳಿದ್ದೆವು. ಹೀಗಾಗಿ ಕೊನೆಗೆ ಅವರು ಮೀಟಿಂಗನ್ನೇ ಕರೆಯಲಿಲ್ಲ. ತಾಲ್ಲೂಕು ಮಟ್ಟದಲ್ಲಿ, ಹಾಗೂ ಜಿಲ್ಲಾಧಿಕಾರಿಗಳ ಜೊತೆ ಒಂದು ಸಾರಿ ಸಭೆ ಕುಳಿತಿದ್ದೆವು. ಮತ್ತೆ ನಮ್ಮನ್ನು ಅವರು ಕರೆಯಿಸಲಿಲ್ಲ. ನಾವು ಆ ಮಧ್ಯೆ ಏನು ಬರವಣಿಗೆಯಲ್ಲಿ ಕೊಟ್ಟಿದ್ದೆವೋ ಅದನ್ನು ಅವರು ಕಣ್ಣೆತ್ತಿಯೂ ನೋಡಿಲ್ಲ. ಅದನ್ನು ನೋಡದೇ ತಮಗೆ ತೋಚಿದ ರೀತಿ ಯಲ್ಲಿ ಮಂಡಲಗಳನ್ನು ಮಾಡಿದ್ದಾರೆ, ಯಾವ ಒಂದು ತತ್ವವೂ ಇಲ್ಲಿ ಪಾಲನೆಯಾಗಿಲ್ಲ. ಎಲ್ಲೋ ಒಂದು ಕಡೆ ಒಂದೊಂದು ಪಾಲನೆ ಆಗಿರಬಹುದು ಅಷ್ಟೇ ಆಗಿಲ್ಲದ್ದರ ಬಗ್ಗೆ ನನ್ನ ಹತ್ತಿರ ಬೇಕಾದಷ್ಟು ಉದಾಹರಣೆಗಳು ಇವೆ. ಅವನ್ನೆಲ್ಲಾ ನಾನು ಇಲ್ಲಿ ತೆಗೆದುಕೊಂಡು ಬಂದು ಕಾಲ ವ್ಯಯ ಮಾಡುವುದಕ್ಕೆ, ನಾನು ಇಷ್ಟಪಡುವುದಿಲ್ಲ.

೪–೦೦ ಪಿ.ಎಂ.

ಭಟ್ಕಳ ತಾಲ್ಲೂಕಿನಲ್ಲಿ ಕೊಪ್ಪ ಎನ್ನತಕ್ಕ ಒಂದು ಊರು ಇದೆ. ಇದು ಒಂದೇ ಒಂದು ಊರು. ಇಲ್ಲಿ ೧೫೫೭ ಜನ ಸಂಖ್ಯೆ ಇರುವುದಕ್ಕೇ ಒಂದು ಮಂಡಲವನ್ನು ಮಾಡಿದ್ದೀರಿ. ಇದನ್ನು ತಾವು ಒಂದು ವಿಶೇಷ ಸಂದರ್ಭದಲ್ಲಿ ಮಾಡಿದ್ದೀರೆಂದು ಕಾಣುತ್ತದೆ. ಸಾಗರ ತಾಲ್ಲೂಕಿನಲ್ಲಿ ಕರೂರು ಎಂಬ ಒಂದು ಹೋಬಳಿ ಇದೆ. ಇದು ಶರಾವತಿ ಯೋಜನೆಯ ಫಲದಿಂದಾಗಿ ಅಸ್ತವ್ಯಸ್ತವಾಗಿ, ಛಿದ್ರಛಿದ್ರವಾದಂಥ ಒಂದು ಹೋಬಳಿ. ಈ ಜನ ಏನು ಕೇಳಿದರು; ೪–೫ ಸಾವಿರ ಜನ ಸಂಖ್ಯೆಗೆ ಒಂದೊಂದು ಮಂಡಲವನ್ನು ಮಾಡಿ ಎಂದು ಕೇಳಿದರು ಆದರೆ ನೀವು ಏತಕ್ಕೆ ಮಾಡಲಿಲ್ಲ? ಹಾಗೆ ಮಾಡಿದರೆ ಸಾಗರ ತಾಲ್ಲೂಕಿನ ಕರೂರು ಒಂದು ಮಂಡಲವಾಗುತ್ತದೆ. ನೀವು ಎಲ್ಲಾ ಸೇರಿಸಿ ಏನು ಮಾಡಿದಿರಿ? ಪೂರ್ವ–ಪಶ್ಚಿಮ ೩೦ ಕಿ ಮೀ. ಉತ್ತರ–ದಕ್ಷಿಣ ೪೦ ಕಿ ಮೀ. ಇದನ್ನೆಲ್ಲಾ ಸೇರಿಸಿ ಒಟ್ಟು ೮೫೫೭ ಜನರಿಗೆ ಒಂದೇ ಮಂಡಲ ವನ್ನು ಮಾಡಿದ್ದೀರಿ. ಇದು ಬಹಳ ದೊಡ್ಡ ಮಂಡಲವಾಗುತ್ತದೆ. ಅಲ್ಲಿ ೧೫೫೭ ಜನ ಸಂಖ್ಯೆ ಇರತಕ್ಕ ಒಂದು ಗ್ರಾಮಕ್ಕೇ ಒಂದು ಮಂಡಲವೆಂದು ಮಾಡಿದ್ದೀರಿ. ಆದರೆ ಇಲ್ಲಿ ೮೫೫೭ ಜನ ಸಂಖ್ಯೆಗೆ ಒಂದು ಮಂಡಲವನ್ನು ಮಾಡಿದ್ದೀರಿ. ಇದು ಸರಿಯೆ? ೪–೫ ಸಾವಿರ ಜನ ಸಂಖ್ಯೆಗೆ ಒಂದೊಂದು ಮಂಡಲವನ್ನು ಮಾಡಬೇಕೆಂದು ಅವರು ಹೇಳಿದ್ದಾರೆ. ಆದರೆ ಪೂರ್ವ–ಪಶ್ಚಿಮ ೩೦ ಕಿ.ಮೀ. ಉತ್ತರ–ದಕ್ಷಿಣ ೪೦ ಕಿ.ಮೀ. ಸೇರಿಸಿ ಒಂದು ಮಂಡಲವನ್ನು ಮಾಡಿದ್ದೀರಿ. ಅಂದ ಮೇಲೆ ಇಲ್ಲಿ "ಪ್ರೊವೈಡೆಡ್" ಎಂದು ಏನು ಹೇಳಿದ್ದೀರಿ ಇದರಲ್ಲಿ ಏನಾದರೂ ಅರ್ಥ ಇದೆಯೆ? ಇಂಥ ಹಲವಾರು ಉದಾಹರಣೆಗಳು ನನ್ನ ಹತ್ತಿರ ಇವೆ. ನನ್ನ ಕ್ಷೇತ್ರದಲ್ಲಿ ಇರುವುದನ್ನು ನಾನು ಹೇಳಿದೆ. ಈಗ ತಾವು ಏನು ಮಾಡಿದ್ದೀರಿ ಇದನ್ನೇ ನಾನು ಬೇಕಾದರೆ ಸುಧಾರಿಸಿಕೊಂಡು ಹೋಗುತ್ತೇನೆ. ಆದರೆ ನಾಳೆ ಇದರಿಂದ ಏನು ಸಾಧಕ–ಬಾಧಕಗಳಾಗುತ್ತವೆ, ಅಥವಾ ತೊಂದರೆ ಆಗಬಹುದು ಎಂಬುದನ್ನೂ ನಾನು ಹೇಳಿದ್ದೇನೆ. ಇದನ್ನು ಚುನಾವಣೆ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಚುನಾವಣೆಯಲ್ಲಿ ನೀವು ಗೆಲ್ಲಬಹುದು, ನಾವು ಸೋಲಬಹುದು, ಅಥವಾ ನಾವು ಗೆಲ್ಲಬಹುದು ನೀವು ಸೋಲಬಹುದು. ಅದು ಬೇರೆ ವಿಷಯ. ಸೊಸೈಟಿಗಳಲ್ಲೂ ಚುನಾವಣೆಗಳು ನಡೆಯುತ್ತವೆ. ಅಲ್ಲೂ ಕೂಡ ಗೆಲ್ಲುವುದು, ಸೋಲುವುದು ಇದ್ದೇ ಇದೆ. ಆದರೆ ಈ ಮಸೂದೆಯಲ್ಲಿ ಮೂಲಭೂತವಾಗಿ ಏನು ದೋಷವಿದೆ ಎಂಬುದನ್ನು ನಾವು ಗಮನಿಸಬೇಕು. ಕಂಪ್ಯಾಟಿಬಿಲಿಟಿಯನ್ನು ಗಮನಿಸಿ ಯಾವುದು ಕೇಂದ್ರ ಬಿಂದು ಎಂದು ತಿಳಿದುಕೊಂಡು ಇದನ್ನು ಮಾಡಬೇಕು. ಆದರೆ ಯಾವ ಅಂಶವನ್ನು ಮುಖ್ಯವಾಗಿ ನೀವು ಯೋಚನೆ ಮಾಡಬೇಕಾಗಿತ್ತೋ? ಯಾವುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿತ್ತೊ ಅದರಂತೆ

ಮಾಡಲಿಲ್ಲ. ಮೂಲಭೂತವಾಗಿ ಅದನ್ನು ಯೋಚನೆ ಮಾಡದೆ ಇಲ್ಲಿ ನಾವು ಈ ಮಸೂದೆಯ ಬಗ್ಗೆ ಚರ್ಚೆ ಮಾಡುವುದಾದರೆ ಅದರಿಂದ ಏನು ಪ್ರಯೋಜನ? ತಮ್ಮ ಮನಸ್ವೇಚ್ಛೆಯಾಗಿ ಈ ಮಸೂದೆಯನ್ನು ತಯಾರು ಮಾಡಿದ್ದೀರಿ. ಇದಕ್ಕೆ ನಾನು ಭಟ್ಕಳದಲ್ಲಿ ೮ ಸಾವಿರಕ್ಕಿಂತ ಕಡಿಮೆ ಇರತಕ್ಕದ್ದೆಂದು ಮಾಡಬಹುದೆಂದು ಅವರು ಹೇಳಿದ್ದಾರೆ. ಅಲ್ಲಿ ೧೫೫೭ ಜನ ಸಂಖ್ಯೆಗೆ ಒಂದು ಮಂಡಲ ಆಯಿತು. ಸಾಗರ ತಾಲ್ಲೂಕಿನಲ್ಲಿ ೨ ಹೋಬಳಿಯನ್ನು ಮಾಡಬೇಕಾಗಿತ್ತು, ಆದರೆ ಮಾಡಲಿಲ್ಲ. ನಾನು ಹೇಳುವುದನ್ನು ತಾವು ಒಪ್ಪಿಕೊಳ್ಳುತ್ತಿದ್ದೀರಿ ಆದರೆ ಒಂದೇ ಒಂದು ಸಾರಿ ತಾವು ಒಂದು ಸಭೆಯನ್ನು ಕರೆದು ನಮ್ಮನ್ನು ಆಹ್ವಾನಿಸಿ ಬಿಡಿಸಲಾಗದ ಒಂದು ವಿಷಯವನ್ನು ಸಭೆಯ ಮುಂದಿಟ್ಟಿರಿ. ಆಮೇಲೆ ನಿಮ್ಮನ್ನು ಇನ್ನೊಂದು ಮೀಟಿಂಗ್‌ಗೆ ಕರೆಯುತ್ತೇವೆಂದು ಹೇಳಿದಿರಿ. ಆದರೆ ಆಗ ನಮ್ಮನ್ನು ಕರೆಯದೆ ನಿಮ್ಮ ಮನಸ್ಸಿಗೆ ಬಂದಂತೆ ಮಾಡಿ ಇವೊತ್ತು ಈ ಮಸೂದೆಯನ್ನು ಈ ರೀತಿ ಮಾಡಿದ್ದೀರಿ. ಹೀಗೆ ನಿಮ್ಮ ಮನಸ್ಸಿಗೆ ಬಂದಂತೆ ಮಾಡಿ ಚುನಾವಣೆಯಲ್ಲಿ ನಿಮ್ಮ ಪಕ್ಷದವರಿಗೆ ಅನುಕೂಲ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ನೀವು ಮಾಡಿದ್ದೀರಿ ಎಂದು ನಾನು ಆಪಾದನೆ ಮಾಡಲು ಸಿದ್ಧನಿಲ್ಲ. ಕೇವಲ ನನ್ನ ಒಂದು ಕ್ಷೇತ್ರದಲ್ಲೇ ಹೀಗೆ ಆಗಿಲ್ಲ. ನಿಮ್ಮ ಪಕ್ಷದ ಕೆಲವು ಶಾಸಕರ ಕ್ಷೇತ್ರದಲ್ಲೂ ಇದೇ ಕಥೆ ಆಗಿದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಯಾವುದೇ ವಿಚಾರವನ್ನಾಗಲಿ ನಾನು ತಿರುಗು ಮುರುಗು ಮಾಡುವುದಕ್ಕೆ ಸಿದ್ಧನಿಲ್ಲ. ಒಟ್ಟಿನಲ್ಲಿ ಮೂಲಭೂತವಾಗಿ ಏನೇನು ತಿದ್ದುಪಡಿಗಳನ್ನು ತರಬೇಕಾಗಿತ್ತು, ಏನೇನು ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ಮಂಡಲಗಳನ್ನು ವಿಂಗಡಿಸಬೇಕೆಂದು ನೀವು ಉದ್ದೇಶವನ್ನು ಇಟ್ಟುಕೊಂಡಿದ್ದೀರೋ ಆ ಉದ್ದೇಶ ಸಫಲವಾಗುವುದಿಲ್ಲ. ಆದರೆ ಈಗ ತಾವು ಏನು ಮಾಡುತ್ತೀರಿ ಎಂಬುದು ನಮಗೆ ಮುಖ್ಯ. ಈಗ ಈ ಮಸೂದೆಗೆ ಅಂಗೀಕಾರವನ್ನು ತುರ್ತಾಗಿ ಪಡೆದು ಜಾರಿಗೆ ತರಬೇಕೆಂದು ಹೊರಟರೆ ಮುಂದೆ ಬಹಳ ಕಷ್ಟಕ್ಕೆ ನೀವು ಸಿಲುಕಬೇಕಾಗುತ್ತದೆ. ಅಧಿಕಾರಿಗಳು ಗೊಂದಲದಲ್ಲಿ ಸಿಕ್ಕಿಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ಮಸೂದೆಯ ಬಗ್ಗೆ ನೀವು ಏನು ಉದ್ದೇಶ ಇಟ್ಟುಕೊಂಡಿದ್ದೀರಿ ಎಂಬುದರ ಬಗ್ಗೆ ಉತ್ತರವನ್ನು ಹೇಳಬೇಕು. ಉತ್ತರ ಎನ್ನುವುದಕ್ಕಿಂತ ಮುಖ್ಯವಾಗಿ ನೀವು ಇದನ್ನು ಕೂಲಂಕಷವಾಗಿ ಪುನರ್ ವಿಮರ್ಶೆ ಮಾಡಬೇಕು. ಎಲ್ಲಾ ರಾಜಕೀಯ ಪಕ್ಷಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅವರ ಸಲಹೆ. ಸೂಚನೆಗಳನ್ನು ಪಡೆದು ಈ ಮಸೂದೆಯನ್ನು ಮಂಡನೆ ಮಾಡುತ್ತೇವೆಂದು ಹಿಂದೆ ಹೇಳಿದ್ದಿರಿ. ಆದರೆ ಅದರಂತೆ ನೀವು ಏತಕ್ಕೆ ಮಾಡಲಿಲ್ಲ? ನನ್ನ ಕ್ಷೇತ್ರದಲ್ಲಿ ಜನರ ಅಭಿಪ್ರಾಯವನ್ನು ಪಡೆದು ಒಂದು ಪ್ರೊಪೋಸಲ್‌ನ್ನು ಕೊಡಿ ಎಂದು ಕೇಳುತ್ತೇವೆಂದು ಹೇಳಿದ್ದಿರಿ, ಅದನ್ನೂ ಕೂಡ ನೀವು ಮಾಡಲಿಲ್ಲ. ಮೊದಲು ನಿಮ್ಮ ಉದ್ದೇಶ ಏನಿತ್ತು ಅದಕ್ಕೆ ತದ್ವಿರುದ್ಧವಾದ ಮಸೂದೆ ಇದಾಗಿದೆ ನಿಮ್ಮ ಪ್ರೊವಿಷೋ ಏನಿದೆ ಅದಕ್ಕೆ ತಕ್ಕಂತೆ ನೀವು ಮಾಡಿಲ್ಲ. ಜಿಲ್ಲಾಧಿಕಾರಿಯವರು ಮನಸ್ಸು ಮಾಡಿದರೆ ಯಾವುದನ್ನು ಬೇಕಾದರೂ ಮಂಡಲ ಎಂದು ಮಾಡಬಹುದು. ಆದರೆ ಈ ಸಂದರ್ಭದಲ್ಲಿ ನಿಮ್ಮ ಅಧಿಕಾರಿಗಳನ್ನು ದೂಷಣೆ ಮಾಡುವುದಕ್ಕೆ ನಾನು ಸಿದ್ಧನಾಗಿಲ್ಲ. ಯಾವುದಾದರೂ ಒಂದು ಪ್ರದೇಶವನ್ನು ಕೇಂದ್ರ ಬಿಂದುವಾಗಿ ನೀವು ಮನಸ್ಸಿನಲ್ಲಿ ಕಲ್ಪನೆ ಮಾಡಿಕೊಳ್ಳದೆ ಮಂಡಲಗಳನ್ನು ಮಾಡುವುದಾದರೆ ಮುಂದೆ ಬಹಳ ಕಷ್ಟವಾಗುತ್ತದೆ. ನಾವು ಜಿಲ್ಲಾಧಿಕಾರಿಗಳಿಗೆ ಹೇಳಿದರೆ ಅವರಿಗೂ ಬಹಳ ತೊಂದರೆಯಾಗುತ್ತದೆ. ನೀವು ಯಾವ ಒಂದು ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ಅದು ಶಾಶ್ವತವಾಗಿರಬೇಕೆಂದು ಅಪೇಕ್ಷೆ ಹೊಂದಿದ್ದೀರಿ, ಇದು ವ್ಯವಸ್ಥಿತವಾಗಿ ಆಗಬೇಕೆಂದು ನಿಜವಾದ ಶ್ರದ್ಧೆಯನ್ನು ನೀವು ಹೊಂದಿದ್ದರೆ ದಯಮಾಡಿ ಈ ಮಸೂದೆಯನ್ನು ಪುನರ್ ವಿಮರ್ಶೆ ಮಾಡಿ. ಆದರೆ ತಕ್ಷಣದಲ್ಲಿ ಹೇಗೋ ಈ ಮಸೂದೆಯನ್ನು ಅಂಗೀಕಾರ ಮಾಡಿ ಮುಗಿಸಿದ್ದೇವೆಂದು ತಾವು ಸಮಾಧಾನಪಟ್ಟುಕೊಳ್ಳುವುದಾದರೆ, ಮುಂದೆ ಇದರ ಪ್ರತಿಫಲವನ್ನು ಅನುಭವಿಸಬೇಕಾಗುತ್ತದೆ. ರಾಜ್ಯಾಂಗದ ವಿಚಾರದಲ್ಲಿ ನಾವೂ, ನೀವೂ ವಾದ ಮಾಡುವುದು ಬೇಡ, ಮಾನ್ಯ ಲಕ್ಷ್ಮೀಸಾಗರ್‌ರವರೂ ಇಲ್ಲಿ ವಾದ ಮಾಡುವುದು ಬೇಡ. ಈ ಮಸೂದೆಯ ಬಗ್ಗೆ ಆಸಕ್ತಿ ಇರುವಂಥ ಕೆಲವು ಜನ ಶಾಸಕರನ್ನು ಕರೆದು ಒಂದು ಸಭೆಯನ್ನು ಕರೆದು ಚರ್ಚೆ ಮಾಡಿ. ನಾನು ಇದುವರೆಗೆ ಹೇಳಿದ್ದರಲ್ಲಿ ಸತ್ಯಾಂಶ ಇದೆಯೆಂಬುದು ತಮಗೆ ಕಂಡು ಬಂದರೆ ಆಗ ಒಪ್ಪಿಕೊಳ್ಳಿ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಎಸ್. ಆಚಾರ್. (ಬೈಂದೂರು).—ಸನ್ಮಾನ್ಯ ಉಪ ಸಭಾಧ್ಯಕ್ಷರೆ, ಕರ್ನಾಟಕ ರಾಜ್ಯ ಜಿಲ್ಲಾ ಪರಿಷತ್ತು, ಇತ್ಯಾದಿ, ಇತ್ಯಾದಿ, ಈ ಮಸೂದೆಯನ್ನು ಕುರಿತು ನನಗಿಂತ ಮುಂಚಿತವಾಗಿ ಮಾತನಾಡಿದಂಥ ಅನೇಕ ಮಾನ್ಯ ಸದಸ್ಯರು ಏನು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಅವರ ಅಭಿಪ್ರಾಯಗಳನ್ನು ನಾನು ಸಮರ್ಥಿಸುತ್ತಾ, ಕೆಲವು ಮಾತುಗಳನ್ನು ಹೇಳಬಯಸುತ್ತೇನೆ.

ಮೂಲ ವಿಧೇಯಕವನ್ನು ಕುರಿತಾಗಲಿ, ಅಥವಾ ಅದರ ತತ್ವಗಳ ಬಗ್ಗೆಯಾಗಲಿ ಭಿನ್ನತೆ ಇಲ್ಲದಿದ್ದರೂ ಇದರ ಅನುಷ್ಠಾನದಲ್ಲಿ ಈಗ ತಾನೆ ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಹೇಳಿದಂತೆ ಇರತಕ್ಕ ಅನೇಕ ತೊಂದರೆಗಳ ಬಗ್ಗೆ ಹೇಳುವುದಕ್ಕೆ ನನಗೆ ಒಂದು ಅವಕಾಶ ಇದೆ. ಡಿವಿಜನಲ್ ಕಮಿಷನರ್‌ರವರ ಲೆವೆಲ್‌ನಲ್ಲಿ ಈ ಮಂಡಲ ಆಗುತ್ತದೆ. ನಾವು ಈಗಾಗಲೇ ಹೇಳಿದ್ದೇವೆ. ಮಂಡಲ ಪಂಚಾಯಿತ್‌ಗಳನ್ನು ರಚನೆ ಮಾಡುವಾಗ ಅನೇಕ ರೀತಿಯ ಸಮಸ್ಯೆಗಳು ಏನು ಬರುತ್ತವೆ ಅವುಗಳನ್ನು ಪರಿಶೀಲಿಸಬೇಕು. ಈ ದಿಸೆಯಲ್ಲಿ ಶಾಸಕರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿನವನ್ನು ಕೇಳಲಿಲ್ಲವೆಂದು ನಾವು ಹೇಳುವುದಿಲ್ಲ. ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ೨-೩ ಸಾರಿ ಸಭೆ ಸೇರಿ ಅಲ್ಲಿ ಸರ್ವ ಸಮ್ಮತವಾಗಿ ಆದಂಥ ಅಭಿಪ್ರಾಯಕ್ಕೆ ಮತ್ತೆ ಬದಲಾವಣೆ ಆಗಲು ಕಾರಣ ಏನು? ಗ್ಲೇರಿಂಗ್ ಇನ್‌ಸ್ಟೆನ್ಸ್ ಎಂದರೆ ಮಲೆನಾಡು ಭಾಗದಲ್ಲಿ ಚಿಕ್ಕ ಮಂಡಲಗಳನ್ನು ಮಾಡಿದ್ದೀರಿ. ನಮ್ಮ ಕುಂದಾಪುರ ತಾಲ್ಲೂಕಿನಲ್ಲಿ ಕೇವಲ ೩ ಮಂಡಲಗಳನ್ನು ೮ ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಗೆ ಮಾಡಿದ್ದೀರಿ.

ಇದರ ಪರಿಣಾಮವಾಗಿ ಏನಾಗಿದೆ ಎಂದರೆ ಎಲ್ಲೆಲ್ಲಿ ಚಿಕ್ಕ ಮಂಡಳಿಗಳಾಗಿ ಕೆಲಸ ಮಾಡಲಿಕ್ಕೆ ಸಾಧ್ಯ ಉಂಟೋ ಅದು ಬಹಳ ದೊಡ್ಡದಾಗಿ ಎಂಟು ಕಿಲೋಮೀಟರ್‌ನಿಂದ ಹಿಡಿದು ಸಾಧಾರಣವಾಗಿ ೧೫ ಕಿಲೋ ಮೀಟರ್ ೨೦ ಕಿಲೋಮೀಟರ್‌ವರೆಗೆ, ಮಂಡಲಗಳಾಗಿ ಪರಿವರ್ತನೆಯಾಗಿದೆ. ಅದನ್ನು ಮತ್ತೆ ಪರಿಶೀಲನೆ ಮಾಡಬೇಕಾದ್ದು ಅವಶ್ಯಕತೆ ಇದೆ. ಇದನ್ನು ಸಂಬಂಧಪಟ್ಟವರಿಗೆ ತಿಳಿಸಲಾಗಿದೆ. ಒಂದು ವಿಚಾರ ಕೊಲ್ಲೂರು ಹೆಡ್‌ಕ್ವಾರ್ಟರ್ಸ್ ಆಗಿರತಕ್ಕಂಥದ್ದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಆ ಊರಿಗೆ ಮಾನ್ಯ ಮಂತ್ರಿಗಳು, ಅನೇಕ ಮಂದಿ ಅಧಿಕಾರಿಗಳು ಬರುತ್ತಾರೆ. ಅಲ್ಲಿ ಮಂಡಲ್ ಇದೆ. ಅದು ಹೆಡ್‌ಕ್ವಾರ್ಟರ್ಸಾಗಿ ಇದ್ದಿದ್ದರೆ ಸಮಸ್ಯೆಗಳನ್ನು ಸಂಬಂಧಪಟ್ಟವರಿಗೆ ವಿಚಾರಗಳನ್ನು ತಿಳಿಸಲಿಕ್ಕೆ ಸಾಧ್ಯವಾಗುತ್ತಿತ್ತು. ಅದರ ಬದಲಾಗಿ ಅದಕ್ಕಿಂತ ಐದು ಮೈಲಿ ದೂರದ ಒಂದು ಜಾಗದಲ್ಲಿ ಇರುವ ಗ್ರಾಮದ ಜನಸಂಖ್ಯೆ ಜಾಸ್ತಿ ಇದೆ ಎನ್ನುವ ಕಾರಣದಿಂದ ಅದನ್ನು ಹೆಡ್ ಕ್ವಾರ್ಟರ್ಸ್ ಆಗಿ ಮಾಡಲಾಗಿದೆ. ಇದರ ಪರಿಣಾಮವಾಗಿ ಯಾರೇ ಮಂತ್ರಿಗಳಾಗಿ, ಇನ್ನೊಬ್ಬರು ಬಂದರಾಗಲಿ ತೀರ ಹಿಂದುಳಿದ ಪ್ರದೇಶಗಳ ಸಮಸ್ಯೆಗಳನ್ನು ಹೇಳಲಿಕ್ಕೆ ಸರಿಯಾದ ರೀತಿಯಲ್ಲಿ ರೆಪ್ರಸಂಟೇಷನ್ ಮಾಡಲಿಕ್ಕೆ ಸಾಧ್ಯವಾಗಿಲ್ಲ. ತೊಂದರೆಗಳು ಉಂಟು. ಕೆಲವು ಹಿಂದೆ ಇದ್ದ ಪಂಚಾಯುತಿಗಳು ಯಾವುದು ಇತ್ತು ಅವರು ಹೇಳಿದ್ದಾರೆ. ಹಿಂದೆ ತೀರ್ಮಾನ ತೆಗೆದುಕೊಂಡಾಗ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಪಂಚಾಯಿತಿಗಳನ್ನು ಒಡೆಯುವುದು ಬೇಡ ಎನ್ನುವ ಅಭಿಪ್ರಾಯ ಇತ್ತು. ಅನೇಕ ವರ್ಷಗಳಿಂದ ಆ ಗ್ರಾಮಗಳಲ್ಲಿ ಒಂದು ರೀತಿಯಾದ ಭಾವನಾತ್ಮಕವಾದ ಸಂಬಂಧ ಇತ್ತು. ನಾವು ಒಟ್ಟಾಗಿ ಒಂದು ಮಂಡಲವಾಗಿ ಸಂಯೋಜಿತರಾಗಿರಬೇಕು ಎನ್ನುವ ಭಾವನೆ ಇದ್ದುದನ್ನು ಒಡೆದು ಹಾಕಲಾಗಿದೆ. ಅದನ್ನು ಒಡಯಲಿಕ್ಕೆ ಕಾರಣ ಏನೆಂದರೆ ನಕಾಶೆ ಇಟ್ಟುಕೊಂಡು ಮ್ಯಾಪ್ ಇಟ್ಟುಕೊಂಡು, ಮ್ಯಾಪ್‌ನಲ್ಲಿ ಕಂಟಿನ್ಯೂಯಸ್ ಆಗಿ ಯಾವುದು ಬರುತ್ತದೆ ಅದನ್ನು ಸೇರಿಸಿದರು. ರಸ್ತೆ ಇದ್ದರೆ, ಕಾಡು, ಬೆಟ್ಟ, ನದಿ ಬರುತ್ತದೆ ಎನ್ನುವುದನ್ನು ನೋಡಲಿಲ್ಲ. ಪರಿಣಾಮ ಏನಾಗಿದೆ ಎಂದರೆ ೧೦-೧೫ ಕಿ.ಮೀ. ವರ್ತುಲಾಕಾರವಾಗಿ ಎರಡು ಮೂರು ಗ್ರಾಮಗಳನ್ನು ಹಾಯ್ದು ಹೋಗಬೇಕಾದ ಒಂದು ಮಂಡಲ್ ತಯಾರಾಗಿದೆ, ಅಂಥದ್ದು ಆಗಬಾರದು. ಅದನ್ನು ಮಾಡುವಾಗ ತೊಂದರೆ ಬರುತ್ತದೆ. ತಮಗೆ ಗೊತ್ತಿದೆ ಕೊನೆಯ ಹಂತದಲ್ಲಿ ಇದನ್ನು ಸೇರಿಸಬೇಕು ಎನ್ನುವ ವಿಚಾರವನ್ನು ಹೇಳಲಿಚ್ಛಿಸುತ್ತೇನೆ.

ಅನಂತರ ಪುರಸಭೆಗಳನ್ನು ಪರಿವರ್ತನೆ ಮಾಡುವಾಗ ಒಂದು ಕ್ಲಾಸ್‌ನ್ನು ಸೇರಿಸಿ ಆಜ್ಞೆಯನ್ನು ಹೊರಡಿಸಿದ್ದೀರಿ. ಹತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯಲ್ಲಿ ಇರುವಂಥ ಪುರಸಭೆಗಳನ್ನು ೧೯೭೧ನೇ ಸೆನ್ಸಸ್ ಪ್ರಕಾರ ಮಂಡಲ್ ಪಂಚಾಯತಿಗಳಾಗಿ ಕನ್‌ವರ್ಟ್ ಮಾಡಿ ಆಜ್ಞೆಯನ್ನು ಹೊರಡಿಸಿದ್ದೀರಿ. ನಾನು ಹೇಳುವಂಥಾದ್ದು ಏನೆಂದರೆ ಏತಕ್ಕೆ ಈ ರೀತಿಯಾದ ತಾರತಮ್ಯ? ಮಂಡಲ್ ಪಂಚಾಯತ್ ಮಾಡುವಾಗ ಎಂಟರಿಂದ ಹನ್ನೆರಡು ಸಾವಿರ ಜನಸಂಖ್ಯೆಯನ್ನು ಇಟ್ಟಿರುತ್ತೀರಿ. ಪುರಸಭೆಗಳನ್ನು ಕನ್‌ವರ್ಟ್ ಮಾಡುವಾಗ ೧೦ ಸಾವಿರ ಏತಕ್ಕೆ ಇಟ್ಟಿರಿ? ಇದು ಕೂಡ ಜನರಿಗೆ ಅನುಕೂಲ ಮಾಡುವಂಥ ಕಾರ್ಯಕ್ರಮ. ಬೈಂದೂರು ಮತ್ತು ಸಾಲಿಗ್ರಾಮಗಳಲ್ಲಿ ಪುರಸಭೆ ಇದೆ, ಇನ್ನೂರು ಮುನ್ನೂರು ಜನರು ಜಾಸ್ತಿ ಇದ್ದಾರೆಂದು ೧೯೮೧ರ ಸೆನ್ಸಸ್ ಪ್ರಕಾರ ಪುರಸಭೆ ವಠಾರದ ವ್ಯಾಪ್ತಿಯಲ್ಲಿ ಎನ್‌ಆರ್‌ಇಪಿ, ಇಲ್ಲ ಐಆರ್‌ಡಿಪಿ ಇಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಿಕ್ಕತಕ್ಕಂಥ ಅನೇಕ ಕಾರ್ಯಕ್ರಮ ಅವರಿಗೆ ಸಿಕ್ಕುತ್ತಿಲ್ಲ, ಅದಕ್ಕೋಸ್ಕರವಾಗಿ ಇದು

ಆಗಬೇಕು ಎನ್ನುವ ತತ್ವವನ್ನು ಗಟ್ಟದ ಬಂಡದವರಿಗೂ ಇರುವ ಪ್ರದೇಶಗಳನ್ನು ಕೇವಲ ಎರಡುನೂರು ಮುನ್ನೂರು ಜನಸಂಖ್ಯೆ ಇರುವಂಥ ಕಾರಣಕ್ಕಾಗಿ ಈ ಸೌಲಭ್ಯವನ್ನು ತಪ್ಪಿಸುವುದು ಸರಿಯಲ್ಲ. ಪರಿವರ್ತಿತ ಪಂಚಾಯತಿಗಳಿಗೆ ಚುನಾವಣೆ ಇಲ್ಲವೆಂದು ಒಂದು ಕ್ಲಾಸ್ ಇದೆ. ಮಂಡಲ್ ಪಂಚಾಯಿತಿಗೆ ಯಾವ ತತ್ವವನ್ನು ಹಾಕಿದ್ದೀರಿ, ಪಾಪ್ಯುಲೇಷನ್ ನಾಲ್ಕು ನೂರು Part there of ಒಬ್ಬ ಸದಸ್ಯರನ್ನು ಆಯ್ಕೆ ಮಾಡತಕ್ಕಂಥದ್ದು. ಆ ತತ್ವವನ್ನು ಸರ್ವ ಸಾಮಾನ್ಯವಾಗಿ ಅಂಗೀಕರಿಸಿದಾಗ ಚುನಾವಣೆ ಇಲ್ಲವೆಂದರೆ ತತ್ವಕ್ಕೆ ವಿರುದ್ಧವಾಗುತ್ತದೆ.

ಯಾವಾಗ ಪರಿವರ್ತನೆ ಆಯಿತು, ಆಗ ಚುನಾವಣೆಯನ್ನು ಮಾಡತಕ್ಕಂಥದ್ದು ಸರಿಯೆಂದು ಅನಿಸುತ್ತದೆ. ಮತ್ತೊಂದು ವಿಚಾರ ಹೇಳುವುದಾದರೆ ಅಮೆಂಡಮೆಂಟ್ ಸೆಕ್ಷನ್ ೧೪೦–೧೪೧ ಎರಡು ಪ್ರಾವಿಷೋಗಳನ್ನು ತಾವು ಹೊಸದಾಗಿ ಸೇರಿಸುತ್ತಿದ್ದೀರಿ. ಎರಡು ಸಾವಿರ ವರ್ಷಗಳವರೆಗೆ ಸೆನ್ಸಸ್ ಆಗುವವರೆಗೆ ೭೧ನೇ ಸೆನ್ಸಸನ್ನು ಗಮನದಲ್ಲಿಟ್ಟುಕೊಳ್ಳತಕ್ಕಂಥದ್ದು ಒಳ್ಳೆಯದೆಂದು ನಾವು ತಮ್ಮ ಹತ್ತಿರ ಒಂದು ವಿಚಾರವನ್ನು ಹೇಳುತ್ತಿದ್ದೇನೆ. ಮೂಲ ಕಾನೂನು ಮಾಡುವಾಗ ಸಾಕಷ್ಟು ಅಧ್ಯಯನ ಮಾಡಿದ್ದಾರೆ. ಕಾನೂನು ತಜ್ಞರು ಅಧ್ಯಯನ ಮಾಡಿದ್ದಾರೆಯೋ? ಗ್ರಾಮ ಅಭಿವೃದ್ಧಿ ಕುರಿತಾಗಿ ಚಿಂತನೆ ನಡೆಸಿದ್ದಾರೆಯೋ? ಬೇರೆ ರಾಜ್ಯಗಳಿಗೆ ಹೋಗಿ ಅದರ ವಿಚಾರವನ್ನು ಆಲೋಚನೆ ಮಾಡಿದ್ದಾರೆಯೆ? ಇದನ್ನು ಹೀಗೆ ಮಾಡುವಂಥ ಕಲ್ಪನೆ ಇಟ್ಟುಕೊಂಡು ತಿದ್ದುಪಡಿ ಮಾಡಿದರೆ ಮಾತ್ರ ಮಾನ್ಯ ಖರ್ಗೆ ಮತ್ತು ಮಾನ್ಯ ಶ್ರೀನಿವಾಸರವರು ಹೇಳಿದಂತೆ ಹೊಸದಾಗಿ ಪಟ್ಟಿಗೆ ಸೇರಿಸ ತಕ್ಕಂಥ ಜನರಿಗೆ ಅನುಕೂಲವಾಗುತ್ತದೆ. ಒಂದು ವೇಳೆ ತಿದ್ದುಪಡಿ ಮಾಡದಿದ್ದರೆ ಮೊದಲಿನ ಹಾಗೆಯೇ ಇದ್ದರೆ ಸಮಸ್ಯೆ ಇರುತ್ತಿರಲಿಲ್ಲ. ಇದರ ಬಗ್ಗೆ ತಮಗೆ ಎರಡನೆಯ ಆಲೋಚನೆ ಏತಕ್ಕೆ ಬಂತು? ಅದನ್ನು ಬಿಟ್ಟುಬಿಟ್ಟರೆ ಸಮಸ್ಯೆಯೇ ಬರುವುದಿಲ್ಲ. ಅದೇರೀತಿ ಮಾತನಾಡುವಾಗ ಹೇಳಿದರು. ಷೆಡೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಜನಾಂಗದವರಿಗೆ ಪ್ರಪೋರ್ಷನೇಟ್ ಆಗಿ ರೆಪ್ರಸೆಂಟೇಷನ್ ಕೊಡಬೇಕಾಗುತ್ತದೆ. ಕೇವಲ ೧೮ ಪರ್ಸೆಂಟ್ ಅಲ್ಲ. ಅದಕ್ಕಿಂತ ಹೆಚ್ಚಿಗೆ ಬರಬೇಕೆನ್ನುವುದು ತತ್ವ. ಹತ್ತು ಸಾವಿರ ಪಾಪ್ಯುಲೇಷನ್ ಮಂಡಲ್ ಪಂಚಾಯತ್‌ಗಳಲ್ಲಿದ್ದರೆ ಒಂದು ಸಾವಿರ ಎಂಟನೂರು ಜನಸಂಖ್ಯೆಗೆ ಇದ್ದರೆ ಅವರಿಗೆ ೧೮ ಪರ್ಸೆಂಟ್ ಸಿಗುತ್ತದೆ. ಒಂದು ವೇಳೆ ಐದು ಸಾವಿರ ಜನಸಂಖ್ಯೆ ಇರುತ್ತದೆ ಎಂದರೆ ಅವರಿಗೆ ಹೆಚ್ಚಿನ ರೆಪ್ರಸೆಂಟೇಷನ್ ಸಿಗಬೇಕಾಗುತ್ತದೆ. ೧೯೭೧ನೇ ಸೆನ್ಸಸ್‌ನಲ್ಲಿ ಕಡಿಮೆ ಜನಸಂಖ್ಯೆ ಇರುತ್ತದೆ. ಅನಂತರದ ವರ್ಷಗಳಲ್ಲಿ ಹೊಸಪಟ್ಟಿಯನ್ನು ಸೇರಿಸಿದ್ದರಿಂದಾಗಿ ಹೆಚ್ಚಿಗೆ ಜನರು ಇರುತ್ತಾರೆ. ಅವರು ಓಟನ್ನು ಮಾಡುತ್ತಾರೆ, ಆದರೆ ಸರಿಯಾದ ರೆಪ್ರಸಂಟೇಷನ್ ಇರುವುದಿಲ್ಲ. ಇಂಥ ಅನ್ಯಾಯ ಉಳಿಯುತ್ತದೆ. ಇದನ್ನು ಕುರಿತು ಹೆಚ್ಚಿನ ಚಿಂತನೆ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಸನ್ಮಾನ್ಯ ಅಧ್ಯಕ್ಷರೇ ಈಗ ಜಿಲ್ಲಾ ಪರಿಷತ್, ತಾಲ್ಲೂಕ್ ಪಂಚಾಯತ್ ಮತ್ತು ಮಂಡಲ್ ಪಂಚಾಯತ್ ಬಿಲ್ಲನ್ನು ಏನು ತಂದಿದ್ದಾರೆ ಇದರಿಂದ ಮೂಲಭೂತವಾಗಿ ಈಗಲಾದರೂ ಹಳ್ಳಿಗಳಲ್ಲಿರುವ ಜನರಿಗೆ ಸಹಾಯ ಮಾಡಬೇಕು ಎನ್ನುವುದು ನಿಜಸ್ಥಿತಿ ಇದ್ದರೂ ದುರಾದೃಷ್ಟವಶಾತ್ ಸಮಾಜದ ಪರಿಸ್ಥಿತಿಯಲ್ಲಿ ಯೋಜನೆ ಮಾಡಿ ಆ ಬಗ್ಗೆ ಏನಾದರೂ ಕಳಕಳಿಯಿಂದ ನೋಡಿದರೆ ಈ ಎಲೆಕ್ಷನ್‌ನಲ್ಲಿ ನಮ್ಮ ಏರಿಯಾದಲ್ಲಿ ನನಗೆ ತಿಳಿದ ಮಟ್ಟಿಗೆ ಪಟ್ಟಭದ್ರ ಹಿತಾಸಕ್ತಿಗಳನ್ನು ತುಳಿದು ಹಾಕಿ ಬಡವರಿಗೆ ಸಹಾಯ ಮಾಡಬೇಕು ಎನ್ನುವ ಉದ್ದೇಶ ಇದ್ದರೂ ಕೂಡ ಈಗ ತಂದಿರುವ ಬಿಲ್ಲನ್ನು ನೋಡಿದರೆ ನಿಜವಾಗಿಯೂ ಇದರಿಂದ ಸಾಧಾರಣವಾಗಿ ಉಪಯೋಗವಾಗುವುದಿಲ್ಲ. ಇದಕ್ಕೆ ರಾಜಕಾರಣಿಗಳು ಇರುವುದಿಲ್ಲ. ನನ್ನ ಅನಿಸಿಕೆ ಜಾತಿಯ ಆಧಾರದಮೇಲೆ ನಡೆಯುವಂಥ ಎಲೆಕ್ಷನ್‌ನಲ್ಲಿ ಯಾವ ಒಂದು ಜಾತಿಯವರು ಜಾಸ್ತಿ ಇರುತ್ತಾರೆ ಅವರಲ್ಲಿ ಒಬ್ಬರು ಚೇರ್‌ಮನ್ ಆಗುತ್ತಾರೆ. ಅವನನ್ನು ಸೆಲೆಕ್ಟ್ ಮಾಡುತ್ತಾರೆ. ಬೇಕಾದ ವರನ್ನು ಕ್ಯಾಂಡಿಡೇಟ್ ಮಾಡಿಕೊಳ್ಳುತ್ತಾರೆ. ಅದು ರಾಜಕೀಯದಂತೆ ಹೋಗುತ್ತದೆ. ಅವರು ಏನಾದರೂ ಹೇಳಿಕೊಳ್ಳಲಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಿಮ್ಮ ಪಕ್ಷದವರೇ ಇರತಕ್ಕಂಥ ಪಶ್ಚಿಮ ಬಂಗಾಳದಲ್ಲಿ ಏನಾಗಿದೆ ಹೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಅಲ್ಲಿಯ ಪಾಪ್ಯುಲೇಷನ್ ಎಷ್ಟಿದೆ. ಅದರಂತೆ ಇಲ್ಲಿ ಇಲ್ಲ. ಅಲ್ಲಿ ರಮೇಶ್ ಕುಮಾರ್ ಅಂಥವರು ಒಬ್ಬರು ಇದ್ದಿದ್ದರೆ ಸಾಕಾಗಿತ್ತು. ದೇಶಕ್ಕೆಲ್ಲ ಬೆಂಕಿ ಹಚ್ಚಿ ಬಿಡುತ್ತಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಪಶ್ಚಿಮ ಬಂಗಾಳಕ್ಕೆ ಹೋಲಿಸಿ ನೋಡಿದರೆ ನಮ್ಮ ಕರ್ನಾಟಕ ಸರ್ಕಾರ ಏನೂ ಕಡಿಮೆ ಇಲ್ಲ. ಅದು ಯಾವುದೇ ಸರ್ಕಾರ ಇರಲಿ ಜನತಾ ಸರ್ಕಾರವಿರಲಿ, ಕಾಂಗ್ರೆಸ್ ಸರ್ಕಾರವಿರಲಿ. ಪ್ರಗತಿಯ ಬಗ್ಗೆ ನಮಗೆ ಹೋಲಿಸಿದರೆ ಅವರಿಗಿಂತ ನಾವು ಏನೂ ಕಡಿಮೆ ಇಲ್ಲ. ಪ್ರಗತಿ ಎಂದರೆ ನಮ್ಮಲ್ಲಿದ್ದಾಗ ಒಂದು ಅರ್ಥ, ಅವರಲ್ಲಿಗೆ ಹೋದಾಗ ಅರ್ಥವೇ ಬೇರೆ.

ಶ್ರೀ ಅಬ್ದುಲ್ ನಜೀರ್‌ಸಾಬ್.— ದೇಶದ ಸ್ವತ್ತು ಯಾರು ಯಾರಿಗೆ ಸೇರಬೇಕೋ ಅದು ಅವರಿಗೆ ಸೇರಿದರೆ ಅದು ಪ್ರಗತಿಯ ಲಕ್ಷಣ.

ಶ್ರೀ ಆರ್ ವೆಂಕಟರಾಮಯ್ಯ.—ನಾನು ಮಾನ್ಯ ಅಬ್ದುಲ್ ನಜೀರ್ ಸಾಹೇಬರ ನಿಷ್ಠೆಯ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ತಂದಿರುವ ಅಮೆಂಡ್‌ಮೆಂಟ್ ಪ್ರಕಾರ ನಾನು ಹೇಳುವುದೇನೆಂದರೆ ಮಂಡಲ್ ಪಂಚಾಯತ್ ಮಾಡುವುದಕ್ಕೆ ಎಂಟು ಕಿಲೋಮೀಟರ್ ರೇಡಿಯಸ್ ಕೊಡುತ್ತೀರಿ. ಈಗ ಮಲೆನಾಡು ಏರಿಯದ ನಾಲ್ಕು ಜಿಲ್ಲೆಗಳಲ್ಲಿ ಎಂಟು ಕಿಲೋಮೀಟರ್ ರೇಡಿಯಸ್ ಜನಸಾಂದ್ರತೆ ಇಲ್ಲ ಅದೇ ಬೇರೆ ಕಡೆ ಬಂದರೆ ಜನಸಾಂದ್ರತೆ ಇರುತ್ತದೆ, ಆದರೆ ಎಂಟು ಕಿಲೋಮೀಟರ್ ಬರುವುದಿಲ್ಲ. ಅಂಥಕಡೆ ಒಂದು ಮಂಡಲ್ ಪಂಚಾಯತ್‌ಗೆ ಹೆಡ್‌ಕ್ವಾರ್ಟರ್ಸ್‌ಗೆ ೧೬ ಕಿಲೋಮೀಟರ್ ಬರಬೇಕಾಗುತ್ತದೆ ಅದನ್ನು ಗಮನಿಸಬೇಕು ೨೦ ಕಿಲೋಮೀಟರ್ ವರೆಗೆ ಒಂದು ಪಂಚಾಯತ್ ಹೆಡ್ ಕ್ವಾರ್ಟರ್ಸ್‌ಗೆ ಬರಬೇಕಾಗುತ್ತದೆ. ಅದಕ್ಕೋಸ್ಕರವಾಗಿ ಎಂಟು ಕಿಲೋಮೀಟರ್ ರೇಡಿಯಸ್ ಏನು ಇಟ್ಟಿದ್ದೀರಿ ಅದರಲ್ಲಿ ಜನಸಾಂದ್ರತೆಯನ್ನು ಕೂಡ ಇಡಬೇಕು. ಮುಳಬಾಗಿಲು ತಾಲ್ಲೂಕ್ ದೂರದ ನಾಗವಾರಹಳ್ಳಿಗಳಿಂದ ಬರಬೇಕಾಗುತ್ತದೆ. ಪಡವಗಟ್ಟ ಪಂಚಾಯತ್‌ನ್ನು ಕ್ರಾಸ್ ಮಾಡಿಕೊಂಡು ಬರಬೇಕಾಗುತ್ತದೆ.

೨೦ ಮೈಲು ಆಗುತ್ತದೆ. ಇದನ್ನು ನಾವು ಹೇಳಿದರೆ ಇವರಿಗೆ ಅರ್ಥವಾಗುವುದಿಲ್ಲ. ಕ್ಯಾಲ್ಕು ಲೇಟರ್ಸ್ ಇಟ್ಟುಕೊಂಡು ಈ ಮಂಡಲ್‌ಗಳನ್ನು ಮಾಡಿರುವುದು. ಇವುಗಳು ಕ್ಯಾಲ್ಕುಲೇಟರ್ ಮಂಡಲ್ ಗಳಾಗುತ್ತವೆಯೋ ಹೊರತು, ಜನರ ಹಿತಾಸಕ್ತಿಯನ್ನು ಅರಿತು, ಅವರ ಅನುಕೂಲತೆಗಳನ್ನು ಕುರಿತು ಯೋಚನೆ ಮಾಡಿದ್ದಲ್ಲ. ದುರಾದೃಷ್ಟವಶಾತ್ ಇವರು ಕಟ್ಟುನಿಟ್ಟಾದ ಸೂಚನೆಗಳನ್ನು ಕೊಟ್ಟಿದ್ದಾರೆ. ಎಂಟು ಸಾವಿರಕ್ಕೆ ಮೇಲ್ಪಟ್ಟು ಹನ್ನೆರಡು ಸಾವಿರಕ್ಕೆ ಒಳಪಟ್ಟು ಮತ್ತು ಹತ್ತು ಸಾವಿರ ಸರಾಸರಿಯೆಂದು ಕೊಟ್ಟಿದ್ದಾರೆ. ೧೯೭೧ರ ಸೆನ್ಸಸ್ ಪ್ರಕಾರ ಮಾಡಲು ಹೋಗಿ ಇದು ಮೂರು ಸಾರಿ ರಿವೈಸ್ ಆಯಿತು. ಈಗ ಕೋಲಾರ ಜಿಲ್ಲೆಯಲ್ಲಿ ಒಂದು ಮಂಡಲ ಎಂದರೆ ನಾಲ್ಕು ಪಂಚಾಯತಿಗಳು ಈ ವ್ಯಾಪ್ತಿಗೆ ಬರುತ್ತದೆ. ನೀವು ಹೇಗೆ ಎಲೆಕ್ಷನ್ ನಡೆಸುವುದು ಮಂಡಲಕ್ಕೆ ಏನು ಅಧಿಕಾರ ಕೊಡುತ್ತೀವೆ ಎಂದು ಸ್ಪೆಸಿಫೈ ಮಾಡಿದ್ದಾರೆ. ಅದು ಆಗದೇ ಇದ್ದರೇ ಮೇಲು. ಆಮೇಲೆ ಎಂಟು ಕಿಲೋಮೀಟರ್ ರೇಡಿಯಸ್ ಎಂದು ಏನು ಮಾಡಿದ್ದಾರೆ. ಅದನ್ನು ಕಾಂಟಿಗ್ಯೂಯಿಟಿ ಇಟ್ಟುಕೊಂಡು ಒಂದು ಮಂಡಲ ಮಾಡುವಾಗ ಅಕ್ಕಪಕ್ಕದ ಹಳ್ಳಿಗಳನ್ನು ಮಾತ್ರ ಸೇರಿಸಿ ಒಂದು ಮಂಡಲ್ ಎಂದು ಮಾಡುವುದು ಬಿಟ್ಟು ಕ್ಯಾಲ್ಕು ಲೇಟರ್‌ನಿಂದ ಲೆಕ್ಕಹಾಕಿ ಒಂದು ಮಂಡಲ ಎಂದು ಮಾಡಿದರೆ ಇದರ ಉದ್ದೇಶ ಸಫಲವಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಅದಕ್ಕೋಸ್ಕರ ನಾನು ಹೇಳುವುದು ಏನೆಂದರೆ ಮೂರು ಪಂಚಾಯತ್ ಲಿಮಿಟ್ ಮಾಡಿ ಒಂದು ಕಾಂಪ್ಯಾಕ್ಟ್ ಏರಿಯಾ ಇಟ್ಟುಕೊಂಡು ಒಂದು ಮಂಡಲ್ ಎಂದು ಮಾಡಿದರೆ ನಿಜವಾಗಿಯೂ ಕೂಡ, ಇವರು ಏನು ಉದ್ದೇಶವನ್ನು ಇಟ್ಟುಕೊಂಡಿದ್ದಾರೆ, ಆ ಉದ್ದೇಶ ಸಫಲವಾಗು ತ್ತದೆ. ಇವರ ಗುರಿ ಧ್ಯೇಯವಾದರೂ ಏನು? ಹಳ್ಳಿಗಾಡಿನ ಜನರ ಜೀವನಪರಿಸ್ಥಿತಿ ಬದಲಾಯಿಸ ಬೇಕು ಮತ್ತು ಅವರಿಗೆ ಹೆಚ್ಚು ಅಧಿಕಾರ ಕೊಡಬೇಕು ಎನ್ನುವುದು ಹೀಗೆ ಯೋಚನೆ ಮಾಡುವು ದಾದರೆ ಈಗ ೩೫ ಸಾವಿರ ಇದ್ದುದನ್ನು ೨೫ ಸಾವಿರ ಎಂದು ಏನು ತಿಂದಿದ್ದಾರೆ. ಇದು ಜಾಸ್ತಿಯೇ ಆಯಿತು. ಇದನ್ನು ಇನ್ನೂ ಕಡಿಮೆ ಮಾಡಬೇಕು. ಮಂಡಲ್‌ಗಳು ದೊಡ್ಡದಾದರೆ ತುಂಬಾ ಕಷ್ಟವಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ೬೦ ಹಳ್ಳಿಗಳು ಇರುವ ಮಂಡಲಗಳು ಇವೆ, ೪೨ ಹಳ್ಳಿಗಳು ಇರುವ ಮಂಡಲ್ ಇದೆ. ಆದ್ದರಿಂದ ಈ ಮಂಡಲ್‌ಗಳು ದೊಡ್ಡದಾಯಿತು. ಇದನ್ನು

ಸಾಧ್ಯವಾದಷ್ಟು ಕಡಿಮೆ ಮಾಡಬೇಕು. ಎಂಟು ಮೈಲು ರೇಡಿಯಸ್ ಇಡುವುದಾದರೆ ಪ್ರತಿ ಜಿಲ್ಲೆಗೂ ಅಷ್ಟೇ ಇರಬೇಕು. ಒಂದು ಶಬ್ದವನ್ನು ಸೇರಿಸಬೇಕು 'ಕಾಂಪ್ಯಾಕ್ಟ್ ಅಂಡ್ ಕಾಂಟಿಗ್ಯೂಯಸ್' ಇದನ್ನು ಯೋಚನೆ ಮಾಡಬೇಕಾಗಿತ್ತು. ಆಂಧ್ರ ಪ್ರದೇಶದಲ್ಲಿ ನಾನು ನೋಡಿದ್ದೇನೆ ಅಲ್ಲಿ ದೊಡ್ಡ ಪಂಚಾಯತಿಗಳಿವೆ. ಜನಸಂಖ್ಯೆ ಜಾಸ್ತಿ ಇದ್ದರೆ ಚುನಾವಣೆ ನಡೆಸುವುದು ಕೂಡ ಕಷ್ಟ. ಇದರಿಂದ ವಿಪರೀತವಾಗಿ ಹಣ ಖರ್ಚಾಗುತ್ತದೆ ಪಟ್ಟಭದ್ರ ಹಿತಾಸಕ್ತಿಗಳು ಪಟ್ಟಾಭಿಷೇಕ ಮಾಡಿಕೊಂಡು ಕಾದಿರುತ್ತಾರೆ. ಇದರಿಂದ ಉದ್ದೇಶ, ಈಡೇರುವುದಿಲ್ಲ. ಆದ್ದರಿಂದ ಇದನ್ನು ಸ್ವಲ್ಪ ಪುನರಾಲೋಚನೆ ಮಾಡಿ ಕಾಂಪ್ಯಾಕ್ಟ್ ಏರಿಯಾ ಎಂದು ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಇನ್ನು, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ಕ್ರೈಟೀರಿಯಾಗಳನ್ನೆಲ್ಲಾ ಸೇರಿಸಿ ಒಂದು ಕ್ಲಾಸ್ ಆಗಿ ಮಾಡಿದ್ದಿದ್ದರೆ ಸಾಕಾಗಿತ್ತು ಎಂದು ನಾನು ಹೇಳುವುದು,

ಶ್ರೀ ಅಬ್ದುಲ್ ನಜೀರ್‌ಸಾಬ್.—ಸುಮಾರು ೮ ಸಾವಿರಕ್ಕಿಂತ ಕಡಿಮೆ ಇರುವಂತಹವು ೨೭ ಇವೆ. ಮತ್ತು ೧೨ ಸಾವಿರಕ್ಕೆ ಮೇಲಿರುವಂಥವು ೬ ಘಟಕಗಳು. ಇದು ದುರುಪಯೋಗವಾಗದಂತೆ ತಾತ್ವಿಕವಾಗಿಯೇ ನಾವು ಮಾಡಿರುವುದು. ಎರಡನೆಯದಾಗಿ ಶ್ರೀನಿವಾಸ್‌ರವರು ಹೇಳಿದರು, ಕೆಲವು ಕಡೆ ಶಾಸಕರನ್ನು ಮಾತುಕತೆಗಳಿಗೆ ಕರೆದಿದ್ದರೂ ಅವರ ನಿರ್ದೇಶನಕ್ಕೆ ಬೆಲೆ ಕೊಡಲಿಲ್ಲವೆಂದು ಮಾನ್ಯ ಖರ್ಗೆಯವರು ಅವರನ್ನು ಕರೆಯಲೇ ಇಲ್ಲ ಎಂದರು. ಆದರೆ ನನ್ನಲ್ಲಿರುವ ಮಾಹಿತಿಯ ಪ್ರಕಾರ ತಾಲ್ಲೂಕು ಮಟ್ಟದಲ್ಲಿ ಎಲ್ಲಾ ಪಕ್ಷಗಳ ಅಧ್ಯಕ್ಷರ ಜೊತೆ ಸಮಾಲೋಚನೆ ನಡೆದಿದೆ. ಜಿಲ್ಲಾ ಮಟ್ಟದಲ್ಲಿ ಶಾಸಕರೊಂದಿಗೆ ನಡೆದಿದೆ. ಕೆಲವು ಕಡೆ ಎರಡೂ ತರಹ ಬೇರೆ ಕೆಲವು ಕಡೆ ಒಂದೇ ತರಹ ಆಗಿರಬಹುದು. ಆದರೆ ಶ್ರೀನಿವಾಸ್‌ರವರು ಹೇಳಿದಂತೆ ಪಕ್ಷಭೇದ ಮಾಡಿಲ್ಲ. ಸಾರ್ವತ್ರಿಕವಾಗಿ ಅಂತೂ ಆಗಿಲ್ಲ. ಹೇಗೆಂದರೆ ಪ್ರಥಮ ಹಂತದಲ್ಲಿ ಪ್ರಕಟಣೆಯಾದಾಗ ನಮಗೆ ಬಂದ ದೂರುಗಳ ಸಂಖ್ಯೆ ಶೇಕಡ ೧೦ಕ್ಕಿಂತ ಕಡಿಮೆ ಮತ್ತು ಎರಡನೆಯ ಹಂತದಲ್ಲಿ ಈಗ ಪೂರ್ಣ ಫೈನಲ್ ನೋಟಿಫಿಕೇಷನ್ ಆಗಿ ಡಿವಿಷನಲ್ ಕಮಿಷನರ್‌ರ ಮಟ್ಟಕ್ಕೆ ಬಂದಿರುವ ಅಪೀಲುಗಳಲ್ಲಿ ಅವುಗಳ ಸಂಖ್ಯೆ ಕೇವಲ ಒಂದರಷ್ಟು. ಇಷ್ಟು ಮಾತ್ರ ಅಬ್ಜೆಕ್ಷನ್‌ಗಳನ್ನು ಫೈಲ್ ಮಾಡಿದ್ದಾರೆ. ಕೆಲವು ಕಡೆ ಅನ್ಯಾಯ ಆಗಿರಬಹುದು. ಹಾಗಿದ್ದರೆ ನಾನು ಅದನ್ನು ಒಪ್ಪುತ್ತೇನೆ. ಮೊನ್ನೆ ಯಾರೋ ಕೊಪ್ಪದ ಉದಾಹರಣೆ ಕೊಟ್ಟು ತೋರಿಸಿದರು. ಅದನ್ನು ಬದಲಾಯಿಸಲು ಇವತ್ತಿಗೂ ಕೂಡ ಅವಕಾಶ ಇದೆ. ನಾನು ಕಾನೂನು ಬದ್ಧ ನಿರ್ದೇಶನ ಕೊಡಲಾರೆ. ಆದರೆ ಶಾಸನಕ್ಕೆ ವಿರುದ್ಧವಾದ ರೀತಿ ಆಗಿರುವಂಥದ್ದನ್ನು ಕೂಡಲೇ ಸರಿ ಮಾಡಿ ಎಂದು ನಾನು ಅಭಿಪ್ರಾಯವನ್ನು ವಿಭಾಗಾಧಿಕಾರಿಗಳ ಗಮನಕ್ಕೆ ಕೊಡುತ್ತೇನೆ.

ಅಲ್ಲದೆ ಇವೊತ್ತು ಗಡಿ ವಿಂಗಡಣೆ ಮಾಡಿಬಿಟ್ಟೆವು. ಜೀವಂತ ಘಟಕಗಳಾಗಿದ್ದರು ಚೆನ್ನಾಗಿತ್ತು ಎಂದು ಹೇಳಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಈಗ ಮಾಡಿರುವುದು ಪರಿಪೂರ್ಣವಲ್ಲ. ಮುಂದೆ ಬದಲಾಯಿಸಲು ಶಾಸನದಲ್ಲಿ ಬೇಕಾದಷ್ಟು ಅವಕಾಶ ಇದೆ. ಚುನಾವಣೆಗಳು ನಡೆದು ಮಂಡಲಗಳು ಬಂದಾಗ ಕೂಡ ಜಿಲ್ಲಾಪರಿಷತ್ ಮತ್ತು ಮಂಡಲಗಳನ್ನು ವಿಂಗಡಣೆ ಮಾಡುವ ಅವಕಾಶ ಇದೆ. ಅದನ್ನು ಈ ಶಾಸನದಲ್ಲಿ ನಾವು ಅಳವಡಿಸಿದ್ದೇವೆ. ಒಂದು ದೊಡ್ಡ ಪ್ರಯೋಗದಂತೆ ಇದು. ಹೀಗಿರುವಾಗ ಸಣ್ಣಪುಟ್ಟ ತಪ್ಪುಗಳಾಗಿರಬಹುದು.

ಎರಡನೆಯದು, ಶಾಸನವನ್ನೇನೋ ನೀವು ಮಾಡಿಬಿಟ್ಟಿರಿ. ೪ ಸಾವಿರದಿಂದ ೮ ಸಾವಿರದವರೆಗೆ ಜನಸಂಖ್ಯೆ ಆಧರಿಸಿ ಮಾಡಿದ್ದೀರಿ. ಆದರೆ ೪ ಸಾವಿರಕ್ಕೆ ಕಡಿಮೆ ಕೂಡ ಏಕೆ ಮಾಡಲಿಲ್ಲ ಎಂದಿದ್ದೀರಿ. ಆದರೆ ಹಾಗೆ ಮಾಡಲಾಗಲಿಲ್ಲ, ನಾವು ಏನು ಮಾಡಿದ್ದೇವೆಂದರೆ ನಾನು ಸಾರ್ವತ್ರಿಕವಾಗಿ ಒಂದು ಚದರ ಮೈಲಿಗೆ ಜನಸಂಖ್ಯೆ ಎಷ್ಟಿದೆಯೋ ಅದನ್ನು ಆಧರಿಸಿ ಮಂಡಲವನ್ನು ಗುರುತಿಸಿದ್ದೇವೆ. ಮಲೆನಾಡು ಪ್ರದೇಶದಲ್ಲಿ ೮ ಚದರ ಮೈಲಿಗೆ ಒಂದು ಮಂಡಲ ಎಂದು ಗುರುತಿಸಿದರೆ ಬಯಲು ಪ್ರದೇಶದಲ್ಲಿ ೧೦೦ ಚದರ ಕಿಲೋಮೀಟರ್ ಒಂದು ಮಂಡಲ ಎಂದು ಗುರುತಿಸಿದ್ದೇವೆ. ಮಂಡಲದ ಸುತ್ತಳತೆ ಏನಿದೆ ಅದು ನೂರು ಕಿಲೋಮೀಟರ್‌ಗೆ ಮೀರಿದ್ದುದು ಒಂದೂ ಇಲ್ಲ ಎಂಬುದನ್ನು ನಾನು ಖಾತ್ರಿ ಮಾಡಿಕೊಂಡಿದ್ದೇನೆ.

ನಾವು ಯಾವುದಾದರೂ ಒಂದು ವೈಜ್ಞಾನಿಕ ಸೂತ್ರ ಇಟ್ಟುಕೊಳ್ಳಬೇಕಲ್ಲವೇ, ಸುಮ್ಮನೇ ಮನಸ್ಸಿಗೆ ಬಂದಹಾಗೆ ಮಾಡುವುದಕ್ಕಾಗುವುದಿಲ್ಲ. ನಾವು ಯಾವ ಸೂತ್ರ ಇಟ್ಟುಕೊಂಡಿದ್ದೇವೆಂದರೆ

ಬಯಲು ಪ್ರದೇಶದಲ್ಲಿ, ಹೈದರಾಬಾದ್ ಕರ್ನಾಟಕದಲ್ಲಿ ಬಾಂಬೆ ಕರ್ನಾಟಕದಲ್ಲಿ ೮ ರಿಂದ ೧೦ ಸಾವಿರ ಜನಸಂಖ್ಯೆಗೆ ಒಂದು ಮಂಡಲವನ್ನು ಮಾಡಿದ್ದೇವೆ. ಹೀಗೆ ನಮ್ಮ ಜನಸಂಖ್ಯೆಯೇ ಆಧಾರ. ಮೈಸೂರು ಭಾಗದಲ್ಲಿ ೧೦ ಸಾವಿರದಿಂದ ೧೧ ಸಾವಿರದವರೆಗೆ ಮಾಡಬಹುದೆಂದು ಆಧಾರ ಇಟ್ಟುಕೊಂಡಿದ್ದೇವೆ. ಇದರಿಂದ ನಿಮ್ಮಲ್ಲಿ ಕೆಲವರಿಗಿರುವಂತೆ ನಮ್ಮಲ್ಲಿಯೂ ಕೆಲವರಿಗೆ ಅತೃಪ್ತಿ ಇದೆ. ಆದರೆ ನಾವು ಪಕ್ಷಭೇದ ಮಾಡದೆ ತೆಗೆದುಕೊಂಡ ನಿರ್ಧಾರದಂತೆ ಈ ಸೂತ್ರವನ್ನು ಮಾಡಿದ್ದೇವೆ.

ಶ್ರೀ ರಮೇಶ್ ಕುಮಾರ್.—ವೈಜ್ಞಾನಿಕವಾಗಿ ನಿಮ್ಮ ಸೂತ್ರ ಹೆಚ್ಚು ಕಡಿಮೆ ಆದರೆ ಅದರ ಬಗ್ಗೆ ನಮಗ್ಯಾರಿಗೂ ಅಸಮಾಧಾನ ಇಲ್ಲ. ನೀವು ಈ ಕಾನೂನನ್ನು ಹೇಗೆ ನಿರೂಪಣೆ ಮಾಡುತ್ತಿದ್ದೀರೋ ಅದರ ಹಿನ್ನೆಲೆಯನ್ನು ಅರ್ಥ ಮಾಡಿಕೊಳ್ಳತಕ್ಕ ಸಾಮರ್ಥ್ಯ ಮತ್ತು ಚೈತನ್ಯಗಳು ಅಧಿಕಾರಿಗಳಿಗೂ ಇರಬೇಕು. ಮಾನ್ಯ ವೆಂಕಟರಾಮಯ್ಯನವರು ಹೇಳಿದಂತೆ ಏನೋ ಒಂದು ನಂಬರನ್ನು ಕೊಟ್ಟು ಕ್ಯಾಲ್‌ಕ್ಯುಲೇಟರ್‌ನಲ್ಲಿ ಲೆಕ್ಕಹಾಕಿ ಮಾಡಿ ಎಂದರೆ ಅವರು ಅದೇ ರೀತಿ ಹೋಗುತ್ತಾರೆ, ೧೨೦೦ ಎಂದಿದ್ದರೆ ೧೧೯೯ ಎಂದರೂ ಕಿತ್ತುಹಾಕುತ್ತಾರೆ, ೧೨೦೧ ಇದ್ದರೂ ಕಿತ್ತುಹಾಕುತ್ತಾರೆ. ಈ ರೀತಿಯ ಅವರ ಇರುಸು ಮುರುಸು ಕೆಲಸದಿಂದ ಜಿಗುಪ್ಸೆ ಉಂಟಾಗಿ ಕಾರ್ಯವೆಲ್ಲ ಅಸ್ತವ್ಯಸ್ತವಾಗುತ್ತಿದೆ. ಇಂಥವರಿಗೆ ಪೂರ್ಣ ಅಧಿಕಾರ ಕೊಟ್ಟುಬಿಟ್ಟು ನಾವು ವಿಕೇಂದ್ರೀಕರಣ ಮಾಡುತ್ತೇವೆನ್ನುವುದು ಸಾಧ್ಯವಿಲ್ಲ. ಆದ್ದರಿಂದ ಅಧಿಕಾರಿಗಳ ಮನೋಧರ್ಮದ, ಕಾರ್ಯನೀತಿಯ ಬಗ್ಗೆ ಹುಷಾರಿರಬೇಕೆಂದು ಹೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.— ನಾವು ಒಂದು ಸೂತ್ರವನ್ನು ಅನುಸರಿಸಿ ಮಾಡಿದ್ದೇವೆ. ಈಗ ನಾವು ಮಾಡಿರುವುದು ಬಹಳ ಚೆನ್ನಾಗಿದೆ. ಆದರಿಂದ ಯಾರಿಗೂ ಅತೃಪ್ತಿ ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಮೊದಲು ಏನು ಕಲ್ಪನೆ ಇತ್ತೋ, ಮಂಡಲಗಳು ನಿರ್ಮಾಣವಾಗಬೇಕಾದರೆ ಭಯಂಕರ ರಕ್ತಪಾತವಾಗುತ್ತದೆ ಎಂಬ ಸುಳ್ಳು ಕಲ್ಪನೆ ಸುಳ್ಳಾಗಿದೆ. ಅನೇಕ ರೀತಿಯ ಚರ್ಚೆಗಳು ನಡೆದಿರುವುದರಿಂದ ಶೇಕಡ ೯೦ರಷ್ಟು ಇವುಗಳಲ್ಲಿ

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಸಚಿವರು).—ಸನ್ಮಾನ್ಯ ಸಭಾಧ್ಯಕ್ಷರೇ, ಮೊಟ್ಟಮೊದಲ ಬಾರಿಗೆ ನಾನು ಶ್ರೀ ಶ್ರೀನಿವಾಸ್ ಅವರು ಹೇಳಿದ ಮಾತನ್ನು ಮೆಚ್ಚುತ್ತೇನೆ. ಸುಗ್ರೀವಾಜ್ಞೆ ತಂದು ಈ ಕಾರ್ಯಕ್ರಮ ಆಗಿಹೋಗಿದೆ. ಈಗ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಏನಾದರೂ ವಿಚಾರ ವಿನಿಮಯ ಮಾಡಿ ಸಲಹೆಗಳನ್ನು ಕೊಟ್ಟರೆ, ಅವುಗಳು ವಿಚಾರಾರ್ಹವಾಗಿದ್ದರೆ ಸ್ವೀಕಾರ ಮಾಡಬಹುದು ಅಷ್ಟೆ. ಆದರೆ ಇದರಿಂದ ಹಿಂದೆ ಹೋಗತಕ್ಕಂಥ ಪ್ರಶ್ನೆ ಮಾತ್ರ ಇಲ್ಲ. ಸುಗ್ರೀವಾಜ್ಞೆಯನ್ನು ಅನುಸರಿಸಿ ಈಗಾಗಲೇ ಮಂಡಲ್‌ಗಳ ಘೋಷಣೆ ಆಗಿವೆ. ಜಿಲ್ಲಾ ಪರಿಷತ್ತುಗಳ ವಿಂಗಡಣೆ ಆಗಿದೆ. ಮತ್ತು ಚುನಾವಣೆಯ ಪೂರ್ವ ಸಿದ್ಧತೆಗಳನ್ನು ಕೂಡ ನಡೆಸುತ್ತಿದ್ದೇವೆ. ಮಾನ್ಯ ಸದಸ್ಯರು ಮೂಲಭೂತವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಅದೇನೆಂದರೆ, ೧೯೭೧ರ ಜನಗಣತಿಯನ್ನು ಆಧರಿಸಿ ಇದನ್ನು ಮಾಡುತ್ತಿರುವುದರಿಂದ, ೧೯೭೩ರ ನಂತರ ಪರಿಶಿಷ್ಟ ಜನಾಂಗದವರಿಗೆ ಇದರಿಂದ ಅನ್ಯಾಯವಾಗುತ್ತದೆ ಮತ್ತು ಇವರಿಗೆ ಪ್ರಾತಿನಿಧ್ಯ ಸಿಗುವುದಿಲ್ಲವೆಂದು ಪ್ರಮುಖವಾದ ವಾದವನ್ನು ಶ್ರೀಮಾನ್ ಶ್ರೀನಿವಾಸ್ ಮತ್ತು ಖರ್ಗೆಯವರು ಮಾಡಿದ್ದಾರೆ. ನಾನೇನೂ ಕಾನೂನು ಪಂಡಿತನಲ್ಲ. ಇದನ್ನು ನಾನು ವೈಯಕ್ತಿಕವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಕಾನೂನು ಪಂಡಿತರಿಂದ ಸರ್ಕಾರಕ್ಕೆ ಸಲಹೆಗಳು ಸಿಕ್ಕಿವೆ. ಕಾನೂನು ಇಲಾಖೆಯ ಮತ್ತು ಅಡ್ವೋಕೇಟ್ ಜನರಲ್ ಅವರನ್ನು ಕರೆಯಿಸಿ ವಿಚಾರ ವಿನಿಮಯ ನಡೆಸಿ ಅವರ ಅಭಿಪ್ರಾಯವನ್ನು ಕೇಳಿದಾಗ ಅವರು ಹೌದು, ಈ ಕಾನೂನನ್ನು ಅಳವಡಿಸಬೇಕಾಗುತ್ತದೆ. ಮುನಿಸಿಪಲ್ ಆಕ್ಟ್‌ನಲ್ಲಿ ತಿದ್ದುಪಡಿ ಮಾಡಿದ್ದೇವೆ. ಹಿಂದೆ ಅದೇ ತಾಲ್ಲೂಕು ಬೋರ್ಡ್ ಆಕ್ಟ್‌ಗೆ ೧೯೭೮ರಲ್ಲಿ ತಿದ್ದುಪಡಿಗಳು ಆಗಿವೆ. ಹಾಗೆಯೇ ಇದನ್ನು ಅಳವಡಿಸಬೇಕಾಗುತ್ತದೆ. ಎಂದು ಅವರು ನನ್ನ ಗಮನಕ್ಕೆ ತಂದಿದ್ದರಿಂದ ಈ ಸದನದ ಮುಂದೆ ಸುಗ್ರೀವಾಜ್ಞೆ ಮೂಲಕ ಈ ಕ್ರಮವನ್ನು ಮಾಡಿರತಕ್ಕಂಥದ್ದು. ಈ ದೃಷ್ಟಿಯಿಂದ ಈ ಜನಕ್ಕೆ ಅನ್ಯಾಯ ಆಗಬಾರದು ಮತ್ತು ಇದು ವೈಯಕ್ತಿಕವಾಗಿ ಸರ್ಕಾರದ ಅಭಿಪ್ರಾಯ ಕೂಡ. ಮಾನ್ಯ ಸದಸ್ಯರುಗಳು ಎತ್ತಿರುವ ವಿಚಾರ ಈ ಚುನಾವಣೆಯಲ್ಲಿ ಸಾಧ್ಯವಿಲ್ಲ. ಮುಂದಿನ ಚುನಾವಣೆಗೆ ಕಾನೂನಿನ ಅಥವಾ ರಾಜ್ಯಾಂಗದ ಯಾವ ನಿರ್ಬಂಧವೂ ಇಲ್ಲವೆಂದು ಶ್ರೀ ಖರ್ಗೆಯವರು ಏನು ಹೇಳಿದ್ದಾರೆ, ಅದನ್ನು ನಾವು ಮತ್ತೆ ಪರಿಶೀಲನೆ ಮಾಡುತ್ತೇವೆ. ಕಾನೂನು ಪಂಡಿತರೊಡನೆ ನಾನು ಚರ್ಚೆ ಮಾಡುತ್ತೇನೆ.

ಮುಂದಿನ ಚುನಾವಣೆಗಾದರೂ ನಮ್ಮ ಸ್ವಾತಂತ್ರ್ಯದ ಪರಿಮಿತಿಯಲ್ಲಿ ಅವಕಾಶ ಇದ್ದರೆ ಖಂಡಿತವಾಗಿಯೂ ಮಾಡುತ್ತೇವೆ ಎಂದು ಈ ಸದನದಲ್ಲಿ ತಮ್ಮ ಮುಖಾಂತರ ನಾನು ಭರವಸೆ ಕೊಡುತ್ತೇನೆ.

ಮತ್ತೆ ಕೆಲವು ಮಂಡಲ್ ಪಂಚಾಯತ್‌ಗಳಿಗೆ ೮ ಸಾವಿರ ಕಡಿಮೆ ಇರತಕ್ಕದ್ದು, ಮತ್ತು ೧೨ ಸಾವಿರಕ್ಕಿಂತ ಮೇಲೆ ಇರತಕ್ಕಂಥ ಒಂದು ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಡಬೇಕಾದ ಪ್ರಮೇಯ ಏನು ಬಂತು ಎಂದು ಕೇಳಿದ್ದಾರೆ. ಈ ಒಂದು ತಿದ್ದುಪಡಿಯನ್ನು ತರುವುದಕ್ಕೆ ಮುಂಚೆ ಈಗಾಗಲೇ ಮಲೆನಾಡಿಗೆ ಬೇರೆಯದೇ ಆದ ಶಾಸನ ಇತ್ತು. ಮಲೆನಾಡಿಗೆ ಜನಸಂಖ್ಯೆಯ ಆಧಾರವಾಗಿ ಇದನ್ನು ಕೊಟ್ಟಿದ್ದರೆ, ಬಯಲುಸೀಮೆಗೆ ಆಧಾರ ಬೇರೆ ಇತ್ತು, ೪ ಸಾವಿರದಿಂದ ೮ ಸಾವಿರ ಎಂದು ಅಲ್ಲಿ, ಮತ್ತು ೮ ಸಾವಿರದಿಂದ ೧೨ ಸಾವಿರ ಎಂದು ಇಲ್ಲಿ ನಿಗದಿ ಮಾಡಿದ್ದೇವೆ. ಇದರ ಉದ್ದೇಶ ಏನು ಎಂದರೆ ಪೂರ್ವಭಾವಿಯಾಗಿ ನಾವು ಮಂಡಲ್ ಮಾಡುವುದಕ್ಕೆ ಹೋದಾಗ ನಾನು ಗಮನಿಸಿದ್ದು ಏನೆಂದರೆ, ಬೆಂಗಳೂರು ಜಿಲ್ಲೆಯ ಎರಡು ಭಾಗಗಳು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ. ಗುಲ್ಬರ್ಗಾ ಜಿಲ್ಲೆಯ ಕೆಲವು ಗ್ರಾಮಗಳಲ್ಲಿ, ಒಂದೊಂದು ಗ್ರಾಮದ ಜನಸಂಖ್ಯೆ ೧೨ ಸಾವಿರಕ್ಕಿಂತ ಜಾಸ್ತಿ ಇರುತ್ತದೆ ೨೪ ಸಾವಿರ ಜನಸಂಖ್ಯೆ ಇರತಕ್ಕಂಥ ಗ್ರಾಮವೂ ಇದೆ. ಇದನ್ನು ಒಡೆದು ಎರಡು ಮಂಡಲ್‌ಗಳನ್ನಾಗಿ ಮಾಡುವುದಕ್ಕೆ ಆಗುವುದಿಲ್ಲವೆಂಬ ದೃಷ್ಟಿಯಿಂದ ಇದನ್ನು ಮಾಡಿದ್ದು. ಹಾಗೆಯೇ ನಲವತ್ತು ಕಿಲೋಮೀಟರ್ ವ್ಯಾಪ್ತಿಯಲ್ಲಿ ಬರುವ ಮೂವತ್ತು ಹಳ್ಳಿಗಳು ಇವೆ. ಚಿಕ್ಕ ಚಿಕ್ಕ ಹಳ್ಳಿಗಳಿಂದ ಕೂಡಿರತಕ್ಕಂಥ ಪ್ರದೇಶ ಇದು. ಇಂತಹವುಗಳಿಗೆ ಎಂಟು ಸಾವಿರಕ್ಕಿಂತ ಕಡಿಮೆ ಇದ್ದರೂ ಮಾಡಬೇಕೆಂದು ಈ ತಿದ್ದುಪಡಿಯನ್ನು ಸದುದ್ದೇಶದಿಂದ ತಂದಿದ್ದೇವೆ.

೪-೩೦ ಪಿ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಹೇಗೂ ಪಂಚಾಯತ್ ರಾಜ್ ಮಿನಿಸ್ಟರ್ ಇದ್ದೀರಿ. ಎಷ್ಟು ಜನ ಪಂಚಾಯತ್ ಚೇರ್ಮನ್ ಆಗಿದ್ದಾರೆ, ಈ ರಾಜ್ಯದಲ್ಲಿ ಎಸ್‌ಸಿ ಎಸ್‌ಟಿಗಳು ಎಂಬುದನ್ನು ಅಂಕಿ ಅಂಶ ಕೊಡಿ, ಆಮೇಲೆ ಮಾತಾಡೋಣ.

ಶ್ರೀ ಅಬ್ದುಲ್ ನಜೀರ್ ಸಾಬ್.—ಏತಕ್ಕೆ ಕೊಡಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ನಿಮ್ಮ ಸಿದ್ಧಾಂತ ಬೇರೆ, ನನ್ನ ಸಿದ್ಧಾಂತ ಬೇರೆ, ಸಾರ್ವತ್ರಿಕವಾಗಿ ಹಾಗೆ ಹೇಳುವುದಕ್ಕಾಗುವುದಿಲ್ಲ. ಮಾನ್ಯ ಆಚಾರ್‌ರವರು ಹೇಳಿದಂತೆ ಯಾವುದೇ ಶಾಸನಕ್ಕೆ ವಿರೋಧವಾಗಿ ಅಥವಾ ಶಾಸನದ ಒಟ್ಟು ಅಭಿಪ್ರಾಯಕ್ಕೆ ವಿರೋಧವಾಗಿ ಯಾವುದಾದರೂ ಘಟನೆಗಳಾಗಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಕೂಡಲೆ ಅದನ್ನು ಸರಿ ಮಾಡಿ ಎಂದು ಅಧಿಕಾರಿಗಳಿಗೆ ಹೇಳುತ್ತೇನೆ. ಆಗಲೂ ಆಗದಿದ್ದರೆ ಶಾಸನವನ್ನು ಬದಲಾಯಿಸುವ ಅವಕಾಶ ಇದ್ದೇ ಇದೆ.

ಇನ್ನು ಕೊನೆಯದಾಗಿ ಮಾನ್ಯ ಖರ್ಗೆಯವರಿಗೆ ಒಂದು ಸಂಶಯ ಇದೆ. ಹಳ್ಳಿಗಾಡುಗಳಲ್ಲಿ ಸಿರಿವಂತರು, ಬಲವಂತರು ಜಾತಿ ಪ್ರಾಮುಖ್ಯತೆಯಿಂದೋ ಅಥವಾ ವರ್ಗ ಪ್ರಾಮುಖ್ಯತೆಯಿಂದಲೋ ಈ ದಲಿತ ವರ್ಗದವರ ಮೇಲೆ ಅಧಿಪತ್ಯ ಇಟ್ಟುಕೊಂಡು ಅವರನ್ನು ಶೋಷಣೆ ಮಾಡುತ್ತಾರೆ ಎಂಬ ಸಂಶಯ ಅವರಿಗೆ ಇದೆ. ಅದು ಸಾಧು ಇರಬಹುದು. ಆದರೆ ನೀವು ಜನತಂತ್ರದಲ್ಲಿ ವಿಶ್ವಾಸ ಇಟ್ಟಿದ್ದೀರಿ. ಆದರೆ ಜನತೆಯಲ್ಲಿ ತಮಗೆ ವಿಶ್ವಾಸವಿಲ್ಲ ಎಂದರೆ ಹೇಗೆ? ಜನತಂತ್ರ ವ್ಯವಸ್ಥೆಯಲ್ಲಿ ಬೇರೆ ಯಾರನ್ನು ನಂಬುವುದು? ನೀವು ಪಶ್ಚಿಮ ಬಂಗಾಳದಲ್ಲಿ ಗುಜರಾತಿನಲ್ಲಿರುವ ವ್ಯವಸ್ಥೆಗಳನ್ನು ಹೇಳುತ್ತೀರಿ. ಮಿಚಿಗನ್ ಯೂನಿವರ್ಸಿಟಿಯ ಪ್ರೊಫೆಸರಾದ ಡಾಕ್ಟರ್ ಖೋಲಿ ಎಂಬುವರು ಒಂದು ಪುಸ್ತಕವನ್ನು ಈ ಸ್ಥಳೀಯ ಸಂಸ್ಥೆಗಳ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಬರೆದಿದ್ದಾರೆ. ಬೇಕಾದರೆ ಅದನ್ನು ನಿಮ್ಮ ಬಳಿ ಕಳಿಸುತ್ತೇನೆ, ಓದಿ. ಅವರು ಕಮ್ಯುನಿಸ್ಟರೂ ಅಲ್ಲ, ಸೋಷಿಲಿಸ್ಟರೂ ಅಲ್ಲ. "Only through a democratic process you have to awaken your people and bring out radical social and economic changes.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಆ ಸಿಚಿವೇಷನ್ ಅನ್ನು ಕ್ರಿಯೇಟ್ ಮಾಡಿ ಆಮೇಲೆ ತಾವು ಮಾತನಾಡಿ. ಹಾಗೆ ಮಾಡದೆ ನೀವು ನಿಮ್ಮ ಶಾಸನವನ್ನು ಜಾರಿಗೆ ತಂದರೆ ಅವೂ ಕೂಡ ಕೋಪರೇಟಿವ್ ಸೊಸೈಟಿಗಳಂತಾಗುತ್ತವೆ, ಅಷ್ಟೇ. ಶ್ರೀ ಖರ್ಗೆಯವರನ್ನು ಚುನಾಯಿಸಿದ ಮತದಾರರಿಗೆ,

ಶ್ರೀ ಸಿಂಧ್ಯಾ ಅವರನ್ನು ಚುನಾಯಿಸಿದ ಮತದಾರರಿಗೆ, ಶ್ರೀ ನಜೀರ್‌ಸಾಬ್ ಅವರನ್ನು ಚುನಾಯಿಸಿದ ಮತದಾರರಿಗೆ ಶೋಷಣೆ ರಹಿತ ಸಮಾಜವನ್ನು ನಿರ್ಮಾಣ ಮಾಡುವುದು ಹೇಗೆ ಎಂಬುದು ಗೊತ್ತಿರುವಾಗ, ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಚುನಾವಣೆಗಳ ಸಮಯದಲ್ಲಿ ಎಂತಹವರನ್ನು ಆರಿಸಬೇಕು ಎಂಬುದು ತಿಳಿಯುವುದಿಲ್ಲವೇ? ಪ್ರಾಜ್ಞತೆ ಇರುವಂತಹ ಜನರು ಒಳ್ಳೆಯ ಜನರನ್ನೇ ಆರಿಸುತ್ತಾರೆ. ತಮ್ಮ ಅಭಿಪ್ರಾಯಗಳನ್ನು ಯಾರು ಒಪ್ಪುತ್ತಾರೋ, ಯಾರು ಚೆನ್ನಾಗಿ ಕೆಲಸ ಮಾಡುತ್ತಾರೆಂದು ತಿಳಿದು ಬರುತ್ತದೆಯೋ ಅಂತಹವರನ್ನೇ ಜನರು ಆರಿಸುತ್ತಾರೆಂಬುದು ಇತಿಹಾಸದಿಂದ ನಮಗೆ ತಿಳಿದು ಬರುತ್ತದೆ. ಆದರೆ ಮಾನ್ಯ ಖರ್ಗೆ ಅವರ ಊರಿನಲ್ಲಿ ಮಂಡಲ್ ಪಂಚಾಯತ್ ಚುನಾವಣೆಯಲ್ಲಿ ಇದಕ್ಕೆ ವಿರುದ್ಧವಾಗಿ ಜನರು ಕೆಲಸ ಮಾಡುತ್ತಾರೆಂದು ಅವರು ಹೇಳುವಂಥ ವಾದ ಏನಿದೆ, ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವೊತ್ತು ನಮ್ಮ ಸಮಾಜದಲ್ಲಿರುವಂತಹ ಪರಿಸ್ಥಿತಿಯನ್ನು ತಾವು ಅರ್ಥಮಾಡಿಕೊಳ್ಳಬೇಕು. ಅಸ್ಪೃಶ್ಯತೆ ಎಂಬುದು ಪಟ್ಟಣಗಳಲ್ಲಿ ಇಲ್ಲದಿರಬಹುದು, ಆದರೆ ಹಳ್ಳಿಗಳಲ್ಲಿ ಇವೊತ್ತಿಗೂ ಇದೆ. ವಿಧಾನಸಭಾ ಚುನಾವಣೆಗಳಿಗೂ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳಿಗೂ ವ್ಯತ್ಯಾಸವಿರುತ್ತದೆ. ಪಾರ್ಲಿಮೆಂಟ್ ಚುನಾವಣೆಯಲ್ಲಿ ನೀವು ಸಹ ಸೋತು ವಾಪಸ್ ಬಂದಿರಿ. ಈ ಕಾರಣದಿಂದ ಆ ಚುನಾವಣೆಗಳಿಗೂ ಈ ಚುನಾವಣೆಗಳಿಗೂ ವ್ಯತ್ಯಾಸ ವಿರುತ್ತದೆಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮಂತ್ರಿಗಳು ವಿಧಾನ ಸಭಾ ಚುನಾವಣೆಗೂ ಮುನಿಸಿಪಲ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳಿಗೂ ಹೋಲಿಕೆ ಮಾಡುವುದು ಸರಿಯಲ್ಲ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಸದಸ್ಯರು ಸಿ.ಪಿ.ಎಂ. ಪಕ್ಷದ ಸದಸ್ಯರಾಗಿ ಈ ರೀತಿ ಹೇಳುವುದನ್ನು ನೋಡಿದರೆ ನನಗೆ ಸಂಕಟವಾಗುತ್ತದೆ. ಇದೇ ವಿಚಾರದಲ್ಲಿ ನಾನು ಸನ್ಮಾನ್ಯ ಜ್ಯೋತಿಬಸು ಅವರನ್ನು ಒಂದು ಪ್ರಶ್ನೆ ಕೇಳಿದೆ. ಏನೆಂದರೆ ನೀವು ಸಮಾಜವಾದದ ಬಗ್ಗೆ ಹೇಳುತ್ತೀರಿ, ಆದರೆ ಪಶ್ಚಿಮ ಬಂಗಾಳದಲ್ಲಿರುವ ಪಂಚಾಯಿತಿಗಳನ್ನು ಚುನಾವಣೆಯಲ್ಲಿ ಜಮೀನುದಾರರು ಮತ್ತು ಪಟ್ಟಭದ್ರಹಿತಾಶಕ್ತಿಗಳು ಸೆಳೆದುಕೊಂಡಿವೆ ಎಂಬತಕ್ಕಂಥ ಅಪವಾದವಿದೆ, ಇದಕ್ಕೆ ತಾವೇನು ಹೇಳುತ್ತೀರಿ ಎಂದು ಕೇಳಿದಕ್ಕೆ ಅವರು ನನಗೆ ಕೊಟ್ಟ ಉತ್ತರಗೆಂದರೆ, ಮೊದಲನೆಯ ಚುನಾವಣೆಯಲ್ಲಿ ಇಂತಹವರು ಶೇಕಡಾ ೫೦ ರಿಂದ ೮೦ರವರೆಗೆ ಇದ್ದರು, ಆದರೆ ಎರಡನೆಯ ಚುನಾವಣೆಯಲ್ಲಿ ಇಂತಹವರ ಸಂಖ್ಯೆ ಶೇಕಡ ೨೦ಕ್ಕೆ ಇಳಿಯಿತು ಎಂದು. ಜನರು ಚುನಾವಣೆಗಳಲ್ಲಿ ತಮಗೆ ಬೇಕಾದವರನ್ನು ಆರಿಸುತ್ತಾರೆಂಬುದು ಇದರಿಂದ ನಮಗೆ ಅರ್ಥವಾಗುತ್ತದೆ. ಜನತಂತ್ರವ್ಯವಸ್ಥೆ ಬೇಡ ಎಂದರೆ ಬೇಡ. ಆದರೆ ನಮ್ಮಲ್ಲಿ ಜನತಂತ್ರವ್ಯವಸ್ಥೆ ಇರುವವರೆಗೆ ನಾವು ಜನರಲ್ಲಿ ವಿಶ್ವಾಸವಿಡಬೇಕು. ಜನತಂತ್ರದಲ್ಲಿ ವಿಶ್ವಾಸ ವಿರುವವರೆಲ್ಲಾ ಜನರಲ್ಲಿ ವಿಶ್ವಾಸವಿಡಬೇಕಾಗುತ್ತದೆ. ಜನರು ಚುನಾವಣೆಯಲ್ಲಿ ಯಾರನ್ನಾದರೂ ಆರಿಸುತ್ತಾರೆ.

ಶ್ರೀ ಯು. ಭೂಪತಿ.—ಈಗಿನ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕಾದರೆ ೫ ಚುನಾವಣೆಗಳಾದರೂ ಸಾಕಾಗುವುದಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಿಮಗೆ ಪಶ್ಚಿಮ ಬಂಗಾಳದ ಉದಾಹರಣೆ ಬೇಡ ಎನ್ನುವುದಾದರೆ ಇಂದು ಕೇರಳಾದಲ್ಲಿ ಏನಾಗಿದೆ ಎಂಬುದನ್ನಾದರೂ ನೋಡಿ. ಮಾನ್ಯ ಸದಸ್ಯರು ಹೇಳುತ್ತಿರುವುದು ಅವರ ಅಭಿಪ್ರಾಯದ ಮಾತು ಅವರ ಶಂಕೆಗೆ ಆಧಾರವಿಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಐತಿಹಾಸಿಕ ದೃಷ್ಟಿಯಿಂದ ನಮ್ಮ ಸಾಮಾಜಿಕ ಬದಲಾವಣೆಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿದರೆ ನಮ್ಮ ಜನತಂತ್ರವ್ಯವಸ್ಥೆಯಲ್ಲಿ ಜನರೇ ಸಾರ್ವಭೌಮರಾಗಿದ್ದಾರೆ. ಆದ್ದರಿಂದ ಜನರು ತಮಗೆ ಬೇಕಾದವರನ್ನು ಆರಿಸುತ್ತಾರೆ. ಈ ಕಾರಣದಿಂದ ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ನಡೆಸ ತಕ್ಕಂಥ ಅಧಿಕಾರವನ್ನು ಅಲ್ಲಿನ ಜನರ ಕೈಗೆ ಕೊಡುವಂತಹ ವ್ಯವಸ್ಥೆಯನ್ನು ನಾವು ಜನತಂತ್ರವ್ಯವಸ್ಥೆಯಲ್ಲಿ ಬೆಳೆಸಿಕೊಳ್ಳಬೇಕು. ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ಜನರಿಗೆ ಹಂಚುವಾಗ ನಾವು ಹಿಂದೆ ಮುಂದೆ ನೋಡುವುದು ಬೇಡ. ಈ ಒಂದು ವ್ಯವಸ್ಥೆಯಲ್ಲಿ ನಾವು ವಿಶ್ವಾಸವಿಡಬೇಕು. ಮಾನ್ಯ ಖರ್ಗೆಯವರುಸಹ ಅಂತಹ ಒಂದು ವಿಶ್ವಾಸವನ್ನು ಬೆಳೆಸಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನನಗೆ ವಿಶ್ವಾಸವಿದೆ. ಆದರೆ ನಮ್ಮ ಈಗಿನ ಸಮಾಜದಲ್ಲಿ ಜಾತಿ ಮತ್ತು ವರ್ಗಗಳ ಸಮಸ್ಯೆ ಇಂದಿಗೂ ಇದೆ ಎಂಬುದನ್ನು ತಾವು ಮರೆಯಬೇಡಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ನಮ್ಮ ಸಮಾಜದಲ್ಲಿ ತಾವು ಹೇಳುವಂತಹ ಸಮಸ್ಯೆ ಇದೆ. ಆದರೆ ಅದನ್ನು ತಾವು ಈ ಒಂದು ಚಿಕ್ಕ ಸಾಧನದ ಮೂಲಕವೇ ಏತಕ್ಕೆ ನೋಡುತ್ತೀರಿ ಪಾರ್ಲಿಮೆಂಟ್ ಚುನಾವಣೆ ಮುಖಾಂತರ ಇಲ್ಲವೇ ವಿಧಾನಸಭಾ ಚುನಾವಣೆ ಮುಖಾಂತರ ಏತಕ್ಕೆ ನೋಡುವುದಿಲ್ಲ? ಬೇರೆ ಚುನಾವಣೆಗಳು ನಡೆಯುವಾಗ ಕ್ರಾಂತಿ ಆಗುವುದಿಲ್ಲ. ಜಿಲ್ಲಾಪರಿಷತ್ ಚುನಾವಣೆಗಳಾಗುವಾಗ ಮಾತ್ರ ಕ್ರಾಂತಿ ಆಗುತ್ತದೆಂದು ಯಾವ ರೀತಿ ಹೇಳುತ್ತೀರಿ?

ಶ್ರೀ ಕೆ. ಎಚ್. ಶ್ರೀನಿವಾಸ್.—ಇದೊಂದು ಕ್ರಾಂತಿಕಾರವಾದಂಥ ಹೆಜ್ಜೆ ಎಂದು ತಾವು ಹೇಳಿದ್ದರಿಂದ ನಾವು ಇದರ ಮೂಲಕವೇ ನೋಡುತ್ತೇವೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನು ಇದನ್ನು ಪರಿಪೂರ್ಣವಾದಂಥ ಶಾಸನ ಎಂದು ಹೇಳುವುದಿಲ್ಲ. ಮನುಷ್ಯನೇ ಅಪರಿಪೂರ್ಣ. ಆದ್ದರಿಂದ ಮನುಷ್ಯ ಮಾಡುವ ಶಾಸನಗಳು ಪರಿಪೂರ್ಣವಾಗಿರುವುದಿಲ್ಲ. ಜನರ ಕೈಗೆ ಅಧಿಕಾರ ಕೊಡುವ ಸಲುವಾಗಿ ಈ ಶಾಸನವನ್ನು ತಂದಿರುವುದು, ಮುಂದೆ ಏನಾದರೂ......

ಶ್ರೀ ಎಸ್. ಬಂಗಾರಪ್ಪ.—ಪರಿಪೂರ್ಣವಾದಂಥ ಶಾಸನವನ್ನು ಯಾವಾಗ ಮಾಡುತ್ತೀರಿ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಪರಿಪೂರ್ಣತೆಯನ್ನು ಪಡೆದುಕೊಳ್ಳಲು ಮನುಷ್ಯ ಪ್ರಯತ್ನ ಮಾಡಿದರೂ ಸಹ ಅದು ಇನ್ನೂ ಫಲಕಾರಿಯಾಗಿಲ್ಲ. ಒಂದು ವೇಳೆ ಮನುಷ್ಯ ಪರಿಪೂರ್ಣತೆ ಹೊಂದಿದರೆ ಇಂತಹ ಶಾಸನಗಳೇ ಬೇಕಾಗುವುದಿಲ್ಲ. ಆದ್ದರಿಂದ ಈಗಾಗಲೇ ಜಾರಿಯಾಗಿರುವ ಶಾಸನಕ್ಕೆ ತಂದಿರುವ ಈ ತಿದ್ದುಪಡಿ ಮಸೂದೆಯನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಮದುವೆಯಾಗದೆ ಹುಚ್ಚು ಬಿಡುವುದಿಲ್ಲ. ಹುಚ್ಚು ಬಿಡದೆ ಮದುವೆಯಾಗುವುದಿಲ್ಲ ಎಂಬಂತೆ ಆಗಿದೆ. ಆದರೂ ಚುನಾವಣೆ ನಡೆಸಬೇಕೆಂದು ನೀವು ತೀರ್ಮಾನ ಮಾಡಿದ್ದೀರಿ. ಈ ಚುನಾವಣೆಗಳಿಗೆ ಸಂಬಂಧಪಟ್ಟಂತೆ ಸ್ಥಳದ ಶಾಸಕರನ್ನು ಕರೆದು, ಅವರ ಜೊತೆ ಮಾತನಾಡಿ. ಅವರ ಸಲಹೆಗಳನ್ನು ಕಳುಹಿಸಿಕೊಡಬೇಕೆಂದು ತಾವು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಆದೇಶ ಕೊಟ್ಟಿದ್ದರೂ ಸಹ ಅವರು ನಮ್ಮನ್ನು ಕರೆಯಿಸಿ ಮಾತನಾಡಲಿಲ್ಲ. ಆದರೆ ತಾಲ್ಲೂಕ್ ಮಟ್ಟದಲ್ಲಿ ತಹಶೀಲ್‌ದಾರರು ಎಲ್ಲಾ ಪಾರ್ಟಿಯವರನ್ನು ಕರೆದು ಮಾತನಾಡಿದ್ದಾರೆ. ಆದರೆ ಡಿ. ಸಿ. ಅವರು ಮಾತ್ರ ನಮ್ಮನ್ನು ಇಲ್ಲಿಯವರೆಗೆ ಕನ್‌ಸಲ್ಟ್ ಮಾಡಿಲ್ಲ. ನಾಲ್ಕೈದು ಪಕ್ಷದ ಸದಸ್ಯರನ್ನು ಕರೆಯಿಸಿ ಅಧಿಕಾರಿಗಳು ಚರ್ಚೆ ಮಾಡುವಾಗ, ಒಬ್ಬೊಬ್ಬರು ಒಂದೊಂದು ರೀತಿಯ ಸಲಹೆಗಳನ್ನು ಕೊಡುತ್ತಾರೆ. ಕೆಲವರು ಜನಸಂಖ್ಯೆಯ ಬಗ್ಗೆ ಕೆಲವರು ಏರಿಯಾ ಬಗ್ಗೆ, ಕೆಲವರು ವಿಸ್ತೀರ್ಣದ ಬಗ್ಗೆ, ಸಲಹೆಗಳನ್ನು ಕೊಟ್ಟಾಗ ತಾವು ಎಲ್ಲವನ್ನೂ ಪರಿಶೀಲಿಸಬೇಕಾಗುತ್ತದೆ. ಇವೊತ್ತು ನೀವು ಅಧಿಕಾರದಲ್ಲಿರಬಹುದು, ನಾಳೆ ಬೇರೆಯವರು ಅಧಿಕಾರಕ್ಕೆ ಬರಬಹುದು. ಆದ್ದರಿಂದ ಮಂಡಲ್ ಪಂಚಾಯಿತಿ ಚುನಾವಣೆಗಳನ್ನು ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ ಮಾಡಬೇಕಾಗುತ್ತದೆ. ಈಗ ಬಂದಿರುವ ದೂರುಗಳನ್ನು ಪರಿಶೀಲಿಸಲು ಡಿ. ಸಿ. ಅವರಿಗೆ ಅಧಿಕಾರವಿಲ್ಲ, ಆ ದೂರುಗಳೆಲ್ಲಾ ಡಿವಿಜನ್ ಕಮೀಷನರ್ ಹತ್ತಿರ ಬಂದಿವೆ ಎಂದು ತಾವು ಹೇಳುತ್ತಿದ್ದೀರಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಏನಾದರೂ ತಪ್ಪುಗಳಾಗಿದ್ದರೆ, ತಾವು ಅಪೀಲ್ ಮಾಡಿಕೊಳ್ಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲಿಯವರೆಗೆ ಯಾರು ಯಾರು ಅಬ್ಜೆಕ್ಷನ್ಸ್ ಫೈಲ್ ಮಾಡಿದ್ದಾರೆ, ಅದನ್ನೆಲ್ಲಾ ರೀಕನ್ಸಿಡರ್ ಮಾಡಬೇಕೆಂದು ತಾವು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡಿ. ಈ ಬಗ್ಗೆ ನೀವು ಮತ್ತೊಮ್ಮೆ ಯೋಚನೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ನೀವು ಎಲ್ಲರಿಗೂ ನ್ಯಾಯ ದೊರಕಿಸಿಕೊಟ್ಟಂತೆ ಆಗುವುದಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್— ಈಗ ಪ್ರೈಮರಿ ಅಬ್ಜಕ್ಷನ್‌ಗಳ ಬಗ್ಗೆ ಪರಿಶೀಲನೆ ಮುಗಿದು ಫೈನಲ್ ನೋಟಿಫಿಕೇಷನ್ ಇಷ್ಯೂ ಆಗಿದೆ. ಈ ಹಂತದಲ್ಲಿ ಏನಾದರೂ ಅಪೀಲ್ ಮಾಡಿಕೊಳ್ಳುವುದಿದ್ದರೆ ಡಿವಿಜನಲ್ ಕಮೀಷನರ್ ಮುಂದೆ ಮಾಡಿಕೊಳ್ಳಬೇಕಾಗುತ್ತದೆ. ಬಂದಂಥ ಅಬ್ಜಕ್ಷನ್‌ಗಳನ್ನು ಪರಿಶೀಲಿಸಲು ನನಗೂ ಸಹ ಅಧಿಕಾರ ಇಲ್ಲ. ಈ ಶಾಸನದಲ್ಲಿ ನಾನು ಯಾವುದೇ ಅಧಿಕಾರವನ್ನು ಇಟ್ಟುಕೊಂಡಿಲ್ಲ. ಮಾನ್ಯ ಶ್ರೀನಿವಾಸ್ ಅವರು ಮಾಡಿದಂಥ ಅಬ್ಜಕ್ಷನ್‌ಗಳನ್ನು ಪರಿಶೀಲನೆ ಮಾಡಿ ಎಂದು ಅಧಿಕಾರಿಗಳಿಗೆ ಹೇಳಿದ್ದೇನೆ. ಅದರಂತೆ ನೀವೂ ಸಹ ಏನಾದರೂ ಅಬ್ಜಕ್ಷನ್‌ಗಳು ಇದ್ದರೆ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ— ಇಲ್ಲಿಯವರೆಗೆ ಅನೇಕ ಜನ ಅಬ್ಜಕ್ಷನ್ ರೈಜ್ ಮಾಡಿದ್ದಾರೆ ಮತ್ತು ಪಿಟಿಷನ್‌ಗಳನ್ನು ಸಹ ಕೊಟ್ಟಿದ್ದಾರೆ. ಅವುಗಳನ್ನೆಲ್ಲಾ ತಾವು ಸರಿಪಡಿಸದಿದ್ದರೆ ಹೇಗೆ?

ಉಪಾಧ್ಯಕ್ಷರು— ಡಿ.ಸಿ. ಅವರಿಗೆ ಕೊಟ್ಟಿರುವ ಪಿಟಿಷನ್‌ಗಳ ಕಾಪಿಗಳನ್ನು ತಾವು ಮಾನ್ಯ ಮಂತ್ರಿಗಳಿಗೆ ಕೊಡಿ. ಅವರು ಸಂಬಂಧಪಟ್ಟವರಿಗೆ ಹೇಳಿ ಸರಿಪಡಿಸುತ್ತಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್— ಏನಾದರೂ ತೊಂದರೆ ಇದ್ದರೆ ಸಮಾಲೋಚನೆ ಮಾಡಿ ಬಗೆಹರಿಸಿಕೊಳ್ಳಬಹುದೆಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಈ ಸಮಾಲೋಚನೆ ಅಂದರೆ ಏನು? ಇದಕ್ಕೆ ಈ ಶಾಸನದಲ್ಲಿ ಅರ್ಥ ವಿಶ್ಲೇಷಣೆ ಇಲ್ಲ. ಒಮ್ಮೆ ಸಮಾಲೋಚನೆಗೆಂದು ಡಿ. ಸಿ. ಅವರು ನಮ್ಮನ್ನು ಕರೆಸಿದ್ದುದು ನಿಜ, ಆಗ ಯಾವುದೇ ರೀತಿಯಲ್ಲಿ ಅರ್ಥಪೂರ್ಣವಾದಂಥ ಚರ್ಚೆ ನಡೆಯಲಿಲ್ಲ. ನಮ್ಮನ್ನು ಸಮಾಲೋಚನೆಗೆ ಕರೆದಾಗ, ನಮ್ಮ ಜೊತೆಯಲ್ಲಿ ಯಾವ ವಿಚಾರದಲ್ಲಿ ಸಮಾಲೋಚನೆ ನಡೆಸಬೇಕು ಎಂಬ ಕಲ್ಪನೆಯೇ ಅವರಲ್ಲಿ ಇರಲಿಲ್ಲ. ನಿಮ್ಮ ಕರ್ತವ್ಯವೇನು ಎಂಬುದು ನಿಮಗೆ ಗೊತ್ತಿಲ್ಲದಿರುವಾಗ ನಾವು ಹೇಳುವುದೇನಿದೆ ಎಂದು ನಾವು ಕೇಳಿದಾಗ ಅವರು ಮತ್ತೊಮ್ಮೆ ನಮ್ಮನ್ನು ಸಮಾಲೋಚನೆಗೆ ಕರೆಯುವುದಾಗಿ ಹೇಳಿದರು. ಆದರೆ ಇವೊತ್ತಿನವರೆಗೂ ಕರೆಯಲಿಲ್ಲ. ನಿಮ್ಮ ಕೆಲಸ ಸುಸೂತ್ರವಾಗಿ ನಡೆಯಬೇಕೆಂಬುದೇ ನಿಮ್ಮ ಸೂತ್ರವಾಗಿದೆ, ಈ ಕಾರಣದಿಂದ ವೇಗದಿಂದ ಕೆಲಸ ಮಾಡಿ ಮುಗಿಸಬೇಕೆಂಬ ತರಾತುರಿಯಲ್ಲಿದ್ದೀರಿ. ಈ ಚುನಾವಣೆಗಳಿಗೆ ಸಂಬಂಧಪಟ್ಟಂತೆ ಎಷ್ಟು ಅಪೀಲ್‌ಗಳು ಬಂದಿವೆ, ಎಷ್ಟು ಅಬ್ಜಕ್ಷನ್‌ಗಳು ಬಂದಿವೆ ಎಂಬುದು ಮುಖ್ಯವಲ್ಲ, ನಾವು ಈ ಬಗ್ಗೆ ಕೊಟ್ಟಂತಹ ಕಾಗದಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಕಣ್ಣೆತ್ತಿ ಸಹ ನೋಡಲಿಲ್ಲ. ಆಗ ನಮ್ಮ ಕಾಗದಗಳಿಗೆ ಬೆಲೆ ಇಲ್ಲ ಎಂದು ಅರ್ಥವಾಯಿತು. ನಂತರ ನಿಮಗೆ ಹೇಗೆ ಬೇಕೋ ಹಾಗೆ ಮಾಡಿಕೊಳ್ಳಿ ಎಂದು ಅವರ ಜೊತೆ ಸಮಾಲೋಚನೆ ಮಾಡಲಿಲ್ಲ. ಆದರೆ ಈಗ ಸಂದರ್ಭ ಬಂದಿದೆ ಎಂದು ನಿಮ್ಮ ಹತ್ತಿರ ಹೇಳುತ್ತಿದ್ದೇವೆ. ಹತಾಶರಾದಂಥ ಜನರು ಯಾವಾಗಲೂ ಅಪೀಲ್ ಮಾಡಿಕೊಳ್ಳಲು ಹೋಗುವುದಿಲ್ಲ. ಅಪೀಲ್‌ಗಳ ಸಂಖ್ಯೆ ಬಹಳ ಕಡಿಮೆ ಎಂಬ ಕಾರಣದಿಂದ ಎಲ್ಲವೂ ಸಂಪಂಬದ್ಧವಾಗಿದೆ ಎಂದು ತಾವು ಹೇಳುತ್ತಿರುವುದು ಸರಿಯೇ? ಬಹಳ ವೇಗದಿಂದ ಕೆಲಸ ಮಾಡಿ ಆಮೇಲೆ ಬದಲಾವಣೆ ಮಾಡುವುದಕ್ಕೆ ಬದಲು ಮೊದಲೇ ಆಗಿರುವ ತಪ್ಪು ಗಳನ್ನು ಸರಿಪಡಿಸಬೇಕು. ಒಂದು ಸಾರಿ ಮಂಡಲದ ವ್ಯವಸ್ಥೆಗಳನ್ನು ತಂದ ಮೇಲೆ, ಆ ಮಂಡಲಗಳಲ್ಲಿ ವೆಸ್ಟೆಡ್ ಇಂಟರೆಸ್ಟ್ ಶುರುವಾಗುತ್ತದೆ. ಆದುದರಿಂದ ಇದನ್ನು ಯೋಚನೆ ಮಾಡಿ ತರಬೇಕು ನಿಮ್ಮ ಉದ್ದೇಶ ಕೆಟ್ಟದಿದೆ ಎಂಬ ಅರ್ಥದಲ್ಲಿ ನಾನು ಹೇಳಲಿಲ್ಲ. ಇದರ ಬಗ್ಗೆ ನಿಮ್ಮದು ದುರುದ್ದೇಶ ಇದೆ ಎಂದು ಹೇಳಲಿಲ್ಲ. ನಿಜವಾಗಿ ನಮ್ಮ ಜೊತೆ ಜಿಲ್ಲಾಧಿಕಾರಿಗಳು ಈ ವಿಷಯವಾಗಿ ಚರ್ಚೆ ಮಾಡಿಲ್ಲ, ಜಿಲ್ಲಾಧಿಕಾರಿಗಳು ಸಾಕಷ್ಟು ಆಲೋಚನೆ ಮಾಡಿ ಈ ಮಂಡಲಗಳನ್ನು ತೀರ್ಮಾನ ಕೊಡುವುದಕ್ಕೆ ಅವಕಾಶವಾಗಿಲ್ಲ. ಅವರುಗಳಿಗೆ ನೀವು ಯಾವ ರೀತಿ ಟೆಲಿಗ್ರಾಮ್‌ಗಳು ಬಂದಿವೆ ಎಂದರೆ ಮಂಡಲಗಳನ್ನು ರಚನೆ ಮಾಡುವ ಬಗ್ಗೆ ೨೪ ಗಂಟೆಗಳಲ್ಲಿ ಬೈ ರಿಟರ್ನ್ ಪೋಸ್ಟ್ ಮೆಸೇಜ್‌ಗಳನ್ನು ಕೊಡಬೇಕೆಂದು ತಿಳಿಸಲಾಗಿದೆ. ೨೪ ಗಂಟೆಗಳ ಒಳಗಾಗಿ ಮಂಡಲಗಳನ್ನು ರಚನೆ ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳು ಮೆಸೇಜ್‌ನ್ನು ಸರ್ಕಾರಕ್ಕೆ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ? ಅವರುಗಳು ಇದರ ಬಗ್ಗೆ ಸಾಕಷ್ಟು ಕೂಲಂಕಷವಾಗಿ ಯೋಚನೆ ಮಾಡುವುದಕ್ಕೆ ಅವಕಾಶವನ್ನು ಕೊಡದೇ ಇದ್ದರೆ ಹೇಗೆ? ಆದುದರಿಂದ ಈ ವಿಷಯವನ್ನು ನೀವು ಗಂಭೀರವಾಗಿ ತೆಗೆದುಕೊಳ್ಳಬೇಕು ನಿಮ್ಮ ಉದ್ದೇಶ ಒಳ್ಳೆಯದಿರಬಹುದು. ಅಥವಾ ನಾಳೆ ದಿನ ಮಂಡಲ್‌ಗಳ ಚುನಾವಣೆ ಮಾಡಿ ಮುಗಿಸಬಹುದು. ನಾನು ಮಾನ್ಯ ನಜೀರ್‌ಸಾಬ್‌ರವರಿಗೆ ವಿನಯಪೂರ್ವಕವಾಗಿ ಹೇಳುವುದೇನೆಂದರೆ. ನಮಾಜ್ ಮಾಡುವುದಕ್ಕೆ ಹೋಗಿ ಮಸೀದಿಯನ್ನು ಮೇಲೆ ಬೀಳಿಸಿಕೊಳ್ಳುವಂತೆ ಆಗಬಾರದು.

† ಶ್ರೀ ಜಿ. ರಾಜೂಗೌಡ.— ಮಾನ್ಯ ಮಂತ್ರಿಗಳ ಗಮನವನ್ನು ಈ ವಿಷಯದ ಕಡೆಗೆ ಸೆಳೆಯುತ್ತೇನೆ. ಮಲೆನಾಡು ಪ್ರದೇಶದಲ್ಲಾಗಲೀ, ಬಯಲು ಸೀಮೆಯಲ್ಲಾಗಲೀ ಒಂದು ಮಂಡಲ ಪಂಚಾಯಿತಿಯಿಂದ ಇನ್ನೊಂದು ಮಂಡಲ ಪಂಚಾಯಿತಿಗೆ ೪೦ ಕಿಲೋಮೀಟರ್ ದೂರ ಇದ್ದರೆ, ವಿಶೇಷ ಸಂದರ್ಭದಲ್ಲಿ ೧೯೭೧ರಲ್ಲಿ ಮಾಡಿದ ಸೆನ್ಸಸ್‌ನ್ನು ಬಿಟ್ಟು ಈಗಿರುವ ಜನಸಂಖ್ಯೆ ಆಧಾರದ ಮೇಲೆ ಮಂಡಲ ಪಂಚಾಯಿತಿಗಳನ್ನು ಮಾಡಬೇಕು. ನನ್ನ ತಾಲ್ಲೂಕಿನಲ್ಲಿ ಒಂದು ಮಂಡಲ ಪಂಚಾಯಿತಿಯನ್ನು ಮಾಡಿದ್ದೀರಿ, ಈ ಮಂಡಲ ಪಂಚಾಯಿತಿಗೂ ಮತ್ತು ಇನ್ನೊಂದು ಮಂಡಲ ಪಂಚಾಯಿತಿಗೂ ೪೦ ಕಿಲೋಮೀಟರ್ ದೂರ ಇದೆ ಹಾಗೂ ಆ ಪ್ರದೇಶ ಬೆಟ್ಟಗಳಿಂದ ಕೂಡಿದ ಪ್ರದೇಶವಾಗಿರುವುದರಿಂದ ಸರಿಯಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೆ ಹೇಗೆ ಆಗುತ್ತದೆ. ಆದುದರಿಂದ ೧೯೭೧ರಲ್ಲಿ ಮಾಡಿದ ಸೆನ್ಸಸ್ ಆಧಾರವನ್ನು ಕೈಬಿಟ್ಟು ೪೦ ಕಿಲೋಮೀಟರ್ ಒಳಗೆ ಎಷ್ಟು ಜನಸಂಖ್ಯೆ ಬರುತ್ತದೆಯೋ ಅದರ ಆಧಾರದ ಮೇಲೆ ಮಂಡಲ್ ಪಂಚಾಯಿತಿ ಮಾಡಬೇಕೆಂದು ಮಾನ್ಯ ಸಭಾಧ್ಯಕ್ಷರ ಮೂಲಕ ಭಿನ್ನವಿಸಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಈಗ ನಡೆಯುವ ಮಂಡಲ ಪಂಚಾಯಿತಿ ಚುನಾವಣೆಗೆ ೧೯೭೧ರಲ್ಲಿ ಮಾಡಿದ ಸೆನ್ಸಸ್‌ನ್ನೇ ಆಧಾರವಾಗಿ ಇಟ್ಟುಕೊಳ್ಳಲಾಗುತ್ತದೆ.

ಶ್ರೀ ಜಿ. ರಾಮಕೃಷ್ಣ.—ಈಗ ಮಂಡಲ ಪಂಚಾಯಿತಿಗಳನ್ನು ಮಾಡುತ್ತೇವೆ. ಆಮೇಲೆ ಇದರ ಬಗ್ಗೆ ಸಮಸ್ಯೆಗಳು ಬಂದರೆ ಆಗ ಸೂಕ್ತವಾಗಿ ಬದಲಾವಣೆ ಮಾಡಿಕೊಳ್ಳಬಹುದು ಎನ್ನುವ ವಿಚಾರವನ್ನು ಹೇಳಿದ್ದಾರೆ. ಒಂದು ಚುನಾಯಿತ ಮಂಡಲ ಪಂಚಾಯಿತಿಯವರು ನಮ್ಮ ವ್ಯಾಪ್ತಿಗೆ ಅದು ಬರುವುದಿಲ್ಲವೆಂದು ಒಂದು ಹಳ್ಳಿಯನ್ನು ಇನ್ನೊಂದು ಮಂಡಲ ಪಂಚಾಯಿತಿಗೆ ಕೊಡುವುದು, ಆ ಮಂಡಲ ಪಂಚಾಯಿತಿಯವರು ನಮಗೂ ಬರುವುದಿಲ್ಲ ಎನ್ನುವುದು ಈ ರೀತಿಯ ಸಮಸ್ಯೆಗಳು ಎದುರಾಗುತ್ತಿವೆ. ಈಗ ನಿಮ್ಮ ಹತ್ತಿರ ಅಧಿಕಾರ ಇದೆ, ಆದುದರಿಂದ ಇಂತಹ ಸಮಸ್ಯೆಗಳು ಬರದ ರೀತಿಯಲ್ಲಿ ತಾವುಗಳು ಏನಾದರೂ ಒಂದು ಒಳ್ಳೆಯ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಟಿ.ಎ.ಪಿ.ಎಂ.ಸಿ.ಗಳನ್ನು ಮಾಡುವಾಗ ೮ ಅಥವಾ ೧೦ ಸಾವಿರ ಜನಸಂಖ್ಯೆ ಇರುವ ಕಡೆ ಒಂದು ಟಿ.ಎ.ಪಿ.ಎಂ.ಸಿ.ಯನ್ನು ಮಾಡುವುದಕ್ಕೆ ಪರಿಶೀಲನೆ ಮಾಡಬೇಕು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಟಿ.ಎ.ಪಿ.ಎಂ.ಸಿ ಗಳನ್ನು ಮಂಜೂರು ಮಾಡುವಲ್ಲಿ ೧೦ ಜನಸಂಖ್ಯೆಗೆ ಒಂದರಂತೆ ಮಾಡುವ ಅಧಿಕಾರ ಮಂತ್ರಿಮಂಡಲಕ್ಕೆ ಇರುತ್ತದೆ. ಈ ರೀತಿ ಸಧ್ಯಕ್ಕೆ ಮಾಡುವುದಕ್ಕಾಗುವುದಿಲ್ಲ. ಮಂಡಲ ಪಂಚಾಯಿತಿಗಳಲ್ಲಿ ಹಳ್ಳಿಗಳನ್ನು ಸರಿಯಾಗಿ ವಿಂಗಡಣೆ ಮಾಡುವಲ್ಲಿ ತೊಂದರೆಯಾಗುತ್ತಿದೆಯೆಂದು ಮಾನ್ಯ ಸದಸ್ಯರು ತಮ್ಮ ಇನ್ನೊಂದು ಪ್ರಶ್ನೆಯಲ್ಲಿ ಹೇಳಿದ್ದಾರೆ. ಅದರ ಬಗ್ಗೆ ಒಂದು ಅಪೀಲನ್ನು ಮಾಡಿದರೆ ಸಂಬಂಧಪಟ್ಟ ಅಧಿಕಾರಿಗೆ ಆ ಅಪೀಲನ್ನು ಕಳುಹಿಸಿ ಸೂಕ್ತ ಏರ್ಪಾಡನ್ನು ಮಾಡಿಸುತ್ತೇನೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಜನತೆಗೆ ಅಧಿಕಾರ ಕೊಡುತ್ತೇವೆ ಎಂದರೆ, ಯಾವ ರೀತಿ ಅಧಿಕಾರವನ್ನು ಕೊಡುವುದು ಎಂಬುದನ್ನು ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಜನತೆಯ ಅಧಿಕಾರ ಎಂದರೆ, ಬೆಂಗಳೂರಿನಲ್ಲೇ ಎಲ್ಲಾ ಅಧಿಕಾರವನ್ನು ಕೇಂದ್ರೀಕರಣ ಆಗಿರುವುದನ್ನು ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಹಂಚುವುದೇ ಜನತೆಗೆ ನೀಡುವ ಅಧಿಕಾರ.

ಶ್ರೀ ಡಿ. ಟಿ. ಜಯಕುಮಾರ್.—ಸನ್ಮಾನ್ಯ ಅಧ್ಯಕ್ಷರೇ, ಮಂಡಲ ಪಂಚಾಯಿತಿಗಳನ್ನು ರಚನೆ ಮಾಡುವ ಸಂದರ್ಭದಲ್ಲಿ ಒಂದು ವಿಷಯವನ್ನು ಗಮನದಲ್ಲಿ ಇಟ್ಟುಕೊಂಡು ಮಂಡಲ ಪಂಚಾಯಿತಿಗಳನ್ನು ರಚನೆ ಮಾಡಬೇಕು. ನಮ್ಮ ತಾಲ್ಲೂಕಿನಲ್ಲಿ ಒಂದು ಹಳ್ಳಿ ಇದೆ. ಆ ಹಳ್ಳಿಯಲ್ಲಿರುವ ಅರ್ಧ ಭಾಗ ಒಂದು ಮಂಡಲ ಪಂಚಾಯಿತಿಗೆ ಸೇರಿದರೆ ಇನ್ನು ಅರ್ಧ ಭಾಗ ಇನ್ನೊಂದು ಮಂಡಲ ಪಂಚಾಯಿತಿಗೆ ಸೇರುತ್ತದೆ. ಈ ರೀತಿ ಒಂದು ಹಳ್ಳಿಯು ಎರಡು ಭಾಗವಾಗಿ ಬೇರೆ ಬೇರೆ ಮಂಡಲ ಪಂಚಾಯಿತಿಗಳಿಗೆ ಅಧಿಕಾರ ಹಂಚಿ ಹೋದರೆ, ಅಭಿವೃದ್ಧಿ ಕೆಲಸಕಾರ್ಯಗಳು ಆಗುವುದಕ್ಕೆ ತೊಂದರೆಯಾಗುತ್ತದೆ. ಆದುದರಿಂದ ಈ ರೀತಿ ಹಳ್ಳಿಗಳನ್ನು ಇಬ್ಭಾಗ ಮಾಡದ ಹಾಗೆ ಪೂರ್ತಿ ಹಳ್ಳಿಯನ್ನು ಒಂದೇ ಮಂಡಲ ಪಂಚಾಯಿತಿಯೊಳಗೆ ಬರುವಂತೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಅದು ಈಗ ಇರುವ ಶಾಸನದ ಪರಿಮಿತಿಯೊಳಗೆ ಏನೂ ಬದಲಾವಣೆ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಂಡಲ ಪಂಚಾಯಿತಿಗಳ ಚುನಾವಣೆಯನ್ನು ಮಾಡುತ್ತೇವೆಂದು ಹೇಳಿರುವ ವಿಷಯ ನಮಗೆ ಗೊತ್ತಾಯಿತು. ಮೇ ತಿಂಗಳಲ್ಲಿ ಈ ಚುನಾವಣೆಗಳನ್ನು ಮಾಡುವುದಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೇವೆ ಎನ್ನುತ್ತಕ್ಕ ಅಭಿಪ್ರಾಯವನ್ನು ತಾವು ಹೇಳಿದಿರಿ. ಚುನಾವಣೆ ಮಾಡುವುದು ಅನುಮಾನವೋ ಅಥವಾ ಚುನಾವಣೆ ಮಾಡುತ್ತೇವೆಂದು ಹೇಳಿರುವುದು ಬರೀ ಅಂದಾಜೋ? ಮಂಡಲ ಪಂಚಾಯಿತಿಗಳನ್ನು ಮೇ ತಿಂಗಳಿನಲ್ಲಿ ಮಾಡತಕ್ಕ ತೀರ್ಮಾನವನ್ನು ಸರ್ಕಾರ ಈಗಾಗಲೇ ಮಾಡಿದೆಯೆ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಸರ್ಕಾರ ಇನ್ನೂ ಇದರ ಬಗ್ಗೆ ತೀರ್ಮಾನ ಕೈಗೊಂಡಿಲ್ಲ. ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಚುನಾವಣೆಗೆ ಎಲ್ಲಾ ಸಿದ್ಧತೆಗಳನ್ನು ನಾವು ಮಾಡಿದ್ದೇವೆ. ಮಂತ್ರಿ ಮಂಡಲವು ಚುನಾವಣೆಯ ದಿನವನ್ನು ಗುರುತು ಮಾಡುವ ಅಧಿಕಾರವನ್ನು ಹೊಂದಿದೆ. ಇನ್ನೂ ದಿನಾಂಕವನ್ನು ಗೊತ್ತು ಮಾಡಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಂಡಲ ಪಂಚಾಯಿತಿಗಳ ಚುನಾವಣೆಯನ್ನು ಮೇ ತಿಂಗಳಿನಲ್ಲಿ ಮಾಡುತ್ತೇವೆಂದು ತಮ್ಮ ಹೇಳಿಕೆ ಪತ್ರಿಕೆಯಲ್ಲಿ ಬಂತು. ಇನ್ನೂ ಏಕೆ ದಿನಾಂಕವನ್ನು ಗೊತ್ತು ಮಾಡಲಿಲ್ಲ ? ಎಲ್ಲಿ ಹೋಯಿತು ನಿಮ್ಮ ಸ್ಪೀಡ್ ? ಎಲ್ಲಿ ಹೋಯಿತು ನಿಮ್ಮ ಕುದುರೆ ಸವಾರಿ ? ನಿಮ್ಮಲ್ಲಿ ಯಾವ ಸ್ಪೀಡು ಈ ಚುನಾವಣೆ ಬಗ್ಗೆ ಇಲ್ಲವಲ್ಲಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವಂತೂ ಮೇ ತಿಂಗಳಿನಲ್ಲಿ ಚುನಾವಣೆ ಮಾಡತಕ್ಕ ಎಲ್ಲಾ ಸಿದ್ಧತೆಗಳನ್ನು ಮಾಡಿದ್ದೇವೆ. ಇದರ ಬಗ್ಗೆ ಕೊನೆಯ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಅದೂ ಅಲ್ಲದೇ ಇವತ್ತು ಬೆಳಿಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಲೋಕಸಭಾ ಸದಸ್ಯರ ಸಭೆಯನ್ನು ಕರೆದಿದ್ದರು. ಅಲ್ಲಿ ಕಾಂಗ್ರೆಸ್ ಪಕ್ಷದ ಎಂ. ಪಿ.ಗಳು ಈಗ ರಾಜ್ಯದಲ್ಲಿ ಬರಗಾಲ ಇರುವುದರಿಂದ ಮಂಡಲ ಪಂಚಾಯಿತಿ ಚುನಾವಣೆಗಳನ್ನು ಮುಂದೂಡಬೇಕೆಂದು ಹೇಳಿದರು. ಆಗ ನಾವು ನಿಮ್ಮ ಪಕ್ಷದ ಮುಖಂಡರಾದ ಮಾನ್ಯ ಬಂಗಾರಪ್ಪನವರನ್ನೂ ಒಂದು ಮಾತು ತಾವುಗಳು ಕೇಳಿ ಹೇಳಬೇಕೆಂದು ಕೇಳಿಕೊಂಡಿದ್ದೇವೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಶಿವಮೊಗ್ಗದಲ್ಲಿ ಜನತಾ ಪಕ್ಷದವರು ಸಭೆ ಸೇರಿ. ಈಗ ಬರಗಾಲ ಇದೆ ಆದ್ದರಿಂದ ಮಂಡಲ ಪಂಚಾಯಿತಿ ಚುನಾವಣೆಗಳನ್ನು ಮುಂದಕ್ಕೆ ಹಾಕಬೇಕೆಂದು ನಿರ್ಣಯ ಮಾಡಿದ್ದಾರೆ ಎಂದು ತಿಳಿದು ಬಂದಿದೆ. ಈ ವಿಷಯವನ್ನು ತಾವು ಏಕೆ ಸಭೆಯಲ್ಲಿ ಹೇಳಬಾರದು ?

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಪಕ್ಷದವರೇ. ಚುನಾವಣೆಯನ್ನು ಮುಂದೂಡಬೇಕೆಂದ ನಿರ್ಣಯ ಮಾಡಿರುವ ಬಗ್ಗೆ ತಾವು ಏಕೆ ಹೇಳುತ್ತಿಲ್ಲ ? ಬರಗಾಲದ ಒಂದು ಕಾರಣವನ್ನು ಹುಡುಕಿಕೊಂಡು ಮಂಡಲ ಪಂಚಾಯಿತಿ ಚುನಾವಣೆಗಳನ್ನು ಮುಂದಕ್ಕೆ ಹಾಕತಕ್ಕ ಕೆಲಸವನ್ನು ಮಾಡುತ್ತಿದ್ದೀರಿ.

೫.೦೦ ಪಿ. ಎಂ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರವರಲ್ಲಿ ಒಂದು ಪ್ರಾರ್ಥನೆ. ಯಾವ ನಾಗಲೋಟದಲ್ಲಿ ಈ ಶಾಸನವನ್ನು ಮೊದಲಿನಿಂದಲೂ ಮಾಡಿದೆಯೋ ಅದನ್ನು ಹಿಂತೆಗೆದುಕೊಂಡಿಲ್ಲ. ಯಾವುದೇ ಶಾಸನ ಮಾಡಿರತಕ್ಕಂಥದ್ದರಲ್ಲಿ, ಎಲ್ಲರೂ ವಿಚಾರ ಮಾಡಿ, ಆಗಸ್ಟ್ ೧೪ನೇ ತಾರೀಖಿಗೆ ಇದಕ್ಕೆ ಮಂಜೂರಾತಿ ಸಿಕ್ಕಿ, ೧೫ ನೇ ತಾರೀಖಿನಿಂದ ನಾವು ಅದನ್ನು ಜಾರಿಗೆ ಕೊಟ್ಟಿದ್ದೇವೆ ೧೫ನೇ ತಾರೀಖಿನಿಂದ ಜಾರಿಗೆ ಕೊಟ್ಟ ದಿನದಿಂದ ಇದಕ್ಕೆ ಬೇಕಾದಂತಹ ಶಾಸನದಲ್ಲಿರತಕ್ಕಂತಹ ಕಾಲ ಎಂದರೆ ನಮಗೆ ಆರು ತಿಂಗಳು ಬೇಕು. ಆ ಕಾಲವನ್ನು ಕಡಿಮೆ ಮಾಡಿ ೨೪ ಗಂಟೆಯೊಳಗೆ ಕಳುಹಿಸಿ ಎಂದರೆ ಅದು ಆಗುವುದಿಲ್ಲ. ಅದಕ್ಕಾಗಿ ಇದೇ ಪೂರ್ವಭಾವಿಯಾಗಿ ಮಾಡತಕ್ಕಂತಹ ಕಾರ್ಯಕ್ರಮ. ಆರು ತಿಂಗಳೊಳಗೆ ಇದನ್ನು ಮುಗಿಸಬೇಕೆಂಬ

ದೃಷ್ಟಿಯಿಂದ ಇಷ್ಟು ಮಾಡಿದ್ದೇವೆ. ಇದರಲ್ಲಿ ಯಾವ ದುರುದ್ದೇಶವೂ ಇಲ್ಲ. ಚುನಾವಣೆ ಮಾಡತಕ್ಕಂಥದ್ದರಲ್ಲಿ, ಅದನ್ನು ಮುಂದಕ್ಕೆ ಹಾಕುವಂಥದ್ದರಲ್ಲಿ ಪೂರ್ವಭಾವಿ ಸಿದ್ಧತೆಗಳು ನಡೆಯ ಬೇಕಾಗಿದೆ. ಅದು ಶಾಸನ ಬದ್ಧವಾಗಿ ನಡೆದಿದೆ. ಯಾವುದೂ ಇದರಲ್ಲಿ ವಿಧಾನವಾಗಿಲ್ಲ.

ಅಧ್ಯಕ್ಷರು.—ಈಗ ಉತ್ತರ ವಿವರಣೆ ಮುಕ್ತಾಯವಾಯಿತು. ಈಗ ಪರ್ಯಾಲೋಚನೆ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ೧೯೮೬ನೇ ಇಸವಿಯ ಕರ್ನಾಟಕ ರಾಜ್ಯ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯತ್ ಸಮಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

2ನೇ ಖಂಡ

ಅಧ್ಯಕ್ಷರು.—ಈಗ ಮಾನ್ಯ ವೆಂಕಟರಾಮಯ್ಯನವರು ಕ್ಲಾಸ್ (೨)ಕ್ಕೆ ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಹಾಗೂ ಕ್ಲಾಸ್ (೬)ಕ್ಕೆ ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ.

ಮಾನ್ಯ ಮಂತ್ರಿಯವರು ೪-೫-೬ ಇವುಗಳಿಗೆ ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಅವರು ತಿದ್ದುಪಡಿ ಸೂಚನೆಯನ್ನು ಮಂಡಿಸಬೇಕು.

ಶ್ರೀ ಆರ್ ವೆಂಕಟರಾಮಯ್ಯನವರು.—ಮಾನ್ಯ ಅಧ್ಯಕ್ಷರೇ, ನಾನು ಕ್ಲಾಸ್ (೨) ಕ್ಕೆ ನನ್ನ ತಿದ್ದುಪಡಿಯನ್ನು ಮಂಡಿಸುತ್ತೇನೆ.

> "In the second proviso of Clause 2, after the words "areas of the districts", the words "in the State" shall be inserted.
>
> In line 6 of Second proviso to clause 2, the words "Belgeum, Chickmagalur Dhakshina Kannada, Dharwar Hassan, Kodagu, Shimoga and Uttara Kannada" shall be inserted."

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು.—ಮಾನ್ಯ ಮಂತ್ರಿಯವರು ತಮ್ಮ ತಿದ್ದುಪಡಿಯನ್ನು ಮಂಡಿಸಬೇಕು,

SRI B.R. YAVAGAL (Minister of State for Rural Development and Panchayat Raj).—I beg to move the following amendment to Clause-2.

> "(1) After the words" (hereinafter referred to as the principal Act)", the brackets and figures, "(1) shall be inserted "
>
> "(2) In the third proviso for the words "the Deputy Commissioner may, after previous publication," substitute "the Deputy Commissioner may".
>
> "At the end the following shall be inserted namely.—
>
> (2) For sub-section (3), substitute the following.—

(3) The Commissioner may, either on an application made within Thirty days from the date of the notification by any person aggrieved by such notification, or suomoto, and after giving a reasonable opportunity of being heard to the applicant or the Mandals concerned revise the order of the Deputy Commissioner under sub-section (1) or sub-section (2) and may also, if he consider necessary, modify it as provided in the Third proviso to sub-section (1). Every order so passed, revising or modifying the order of the Deputy Commissioner, shall be published in the Official Gazette."

Question was proposed

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸಲಾಗಿದೆ. ಈಗ ಮಾನ್ಯ ವೆಂಕಟರಾಮಯ್ಯನವರು ಮಾತನಾಡಬಹುದು.

ಶ್ರೀ ಆರ್. ವೆಂಕಟರಾಮಯ್ಯ.—ಈ ನನ್ನ ತಿದ್ದುಪಡಿಯ ಉದ್ದೇಶ ಏನೆಂದರೆ ಹಳ್ಳಿಗಳಲ್ಲಿ ಗ್ರಾಮ ಸ್ವರಾಜ್ಯವನ್ನು ಕೊಡಬೇಕು, ಮತ್ತು ಅಲ್ಲಿರುವ ಜನಗಳಿಗೆ ಸಹಾಯ ಮಾಡಬೇಕು, ಎಂಬುದಾಗಿದೆ. ಇಲ್ಲಿ ಕೆಲವು ಜಿಲ್ಲೆಗಳನ್ನು ಕೊಟ್ಟಿದ್ದಾರೆ. ಇದಕ್ಕೆ ೮ ಕಿ.ಮಿ. ವಿಸ್ತೀರ್ಣದಲ್ಲಿ ಒಂದು ಮಂಡಲ ಪಂಚಾಯತ್‌ನ್ನು ಮಾಡಬೇಕು ಎಂದು ಹೇಳಿದ್ದಾರೆ. ಅದನ್ನು ೮ ಜಿಲ್ಲೆಗಳಿಗೆ ಮಾತ್ರ ಕೊಟ್ಟಿದ್ದಾರೆ. ಅವರ ಉದ್ದೇಶ ಏನೆಂದರೆ. ಇವೆಲ್ಲಾ ಸ್ಕೇರ್‌ನಲ್ಲಿ ಪಾಪ್ಯುಲೇಟೇಡ್ ಇದೆ, ಅದಕ್ಕೋಸ್ಕರ ೮ ಕಿ.ಮಿ. ವಿಸ್ತೀರ್ಣ ಇರಲಿ ಎಂದು ಹೇಳಿದ್ದಾರೆ. ಇಲ್ಲಿ ಸ್ಕೇರ್‌ನಲ್ಲಿ ಪಾಪ್ಯುಲೇಟೆಡ್ ಇದ್ದರೆ, ಬೇರೆ ಜಿಲ್ಲೆಗಳಲ್ಲಿ ಜನಸಾಂದ್ರತೆ ಜಾಸ್ತಿ ಇದೆ. ಅಂತಹ ಕಡೆಗಳಲ್ಲಿಯೂ ಕೂಡ ೮ ಕಿ.ಮೀ. ಬೇಕು. ಒಂದು ಕೊನೆಯಿಂದ ಇನ್ನೊಂದು ಕೊನೆಯ ವರೆಗೂ ೮ ಪ್ಲಸ್ ೮ ಅಂದರೆ ೧೬ ಕಿ.ಮೀ. ಆಗುತ್ತದೆ. ಅದಕ್ಕಿಂತ ಜಾಸ್ತಿ ಆದರೆ ಆ ಪಂಚಾಯತ್ ವೈಯಬಲ್ ಆಗುವುದಿಲ್ಲ. ಅಲ್ಲಿ ನಿಜವಾಗಿಯೂ ಕೂಡ ಅಭಿವೃದ್ಧಿ ಕಾರ್ಯಗಳು ಜರಗುವುದಿಲ್ಲ. ಅದಕ್ಕೋಸ್ಕರ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲಿಯೂ ೮ಕಿ.ಮೀ. ರೇಡಿಯಸ್ ಇರಲಿ ಎಂದು ನಾನು ಇದನ್ನು ಸೂಚಿಸುತ್ತೇನೆ. ಅದನ್ನು ಒಪ್ಪಬೇಕು. ಇನ್ನೊಂದು ಏನೆಂದರೆ, ಇವು ಕಾಂಪ್ಯಾಕ್ಟ್ ಆಗಿ ಇರಬೇಕು. ಒಂದು ಮಂಡಲ ಒಂದೇ ಕಡೆ ಇರಬೇಕು. ಅಕ್ಕಪಕ್ಕದಲ್ಲಿರುವ ಹಳ್ಳಿಗಳು ಮಾತ್ರ ಒಂದಕ್ಕೊಂದು ಸೇರಿರಬೇಕು ಬೇರೆ ಮಂಡಲಗಳು ಒಂದಕ್ಕೊಂದು ಸೇರಿ ಅವುಗಳನ್ನು ಕ್ರಾಸ್ ಮಾಡಿಕೊಂಡು ಒಂದು ಮಂಡಲಕ್ಕೆ ಬರತಕ್ಕಂತಹ ಅವಕಾಶ ಇರಬಾರದು. ಈ ನನ್ನ ತಿದ್ದುಪಡಿಗಳನ್ನು ಒಪ್ಪಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ನಾನು ಹೇಳಿದೆ. ಈ ಹಂತದಲ್ಲಿ ಈ ತಿದ್ದುಪಡಿಯನ್ನು ಒಪ್ಪಲು ನಮಗೆ ಸಾಧ್ಯವಿಲ್ಲ. ಕಾರಣ ಇಷ್ಟೆ, ಒಂದು ವೈಜ್ಞಾನಿಕ ಸೂತ್ರವಾದ ಜನಸಾಂದ್ರತೆಯನ್ನು ಆಧರಿಸಿ, ಮಲೆನಾಡಿಗೆ ಬೇರೆ, ಬಯಲು ಸೀಮೆಗೆ ಬೇರೆ ಎಂದು ನಾವು ತೀರ್ಮಾನ ಮಾಡಿದ್ದೇವೆ. ಅದು ಸಾಧುವಾದುದು ಎಂದು ಸರಕಾರದ ಅಭಿಪ್ರಾಯ. ಆ ದೃಷ್ಟಿಯಿಂದ ಸರಕಾರ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಈ ತಿದ್ದುಪಡಿಯನ್ನು ಅವರು ಒತ್ತಾಯ ಮಾಡುವುದು ಬೇಡ. ಇದರ ಜೊತೆಗೆ ಸರಕಾರವು ತಂದಿರತಕ್ಕಂತಹ ತಿದ್ದುಪಡಿ ಇಷ್ಟೆ. ಈಗ ಇರತಕ್ಕಂಥಾದ್ದು ಏನೆಂದರೆ ಇವೊತ್ತು ನಿಯಮಗಳ ಪ್ರಕಾರ ಡಿವಿಜನಲ್ ಕಮಿಷನರ್‌ರವರಲ್ಲಿ ಅಪೀಲ್ ಹೋಗುತ್ತಾರೆ, ಅದನ್ನು ೩೦ ದಿನಗಳೊಳಗಾಗಿ ಇತ್ಯರ್ಥಮಾಡಿ ತೀರ್ಮಾನ ಕೊಡಬೇಕೆಂದು ಪದ ಇದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಕಮಿಷನರ್ ಎಂದರೆ ಯಾರು ? ಡಿವಿಜನಲ್ ಕಮಿಷನರ್ ರವರೇ, ಅಥವಾ ಕಮಿಷನರ್‌ರವರೆ ?

SRI ABDUL NAZIR SAB.—"Commissioner" has been defined in the Act. The amendment to Clause (2) reads as follows.—

" (3) The Commissioner may, either on an application made within thirty days from the date of the notification by any person aggrieved by such notification, or *suomoto,* and after giving a reasonable opportunity of being heard to the applicant or the Mandals concerned revise the order of the Deputy Commissioner under Sub-Section (1) or Sub-Section (2) and may also, if he considers necessary. modify it, as provided in the Third proviso to Sub-Section (1). Every order so passed revising or modifying the order of the Deputy Commissioner, shall be published in the Official Gazette.

ಇದಕ್ಕೆ ೩೦ ದಿನಗಳ ಸಮಯ ಕೊಡಬೇಕೆಂದು ಇದೆ. ಆ ದೃಷ್ಟಿಯಿಂದ ಅರ್ಜಿದಾರರಿಗೆ ಸ್ವಲ್ಪ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಅದಕ್ಕೆ ತಿದ್ದುಪಡಿಯನ್ನು ತಂದಿದ್ದೇವೆ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ ಈ ತಿದ್ದುಪಡಿಯನ್ನು ಪ್ರೆಸ್ ಮಾಡುತ್ತೀರಾ ?

ಶ್ರೀ ಆರ್. ವೆಂಕಟರಾಮಯ್ಯ.—ಇಲ್ಲ ಸ್ವಾಮಿ ನಾನು ಒತ್ತಾಯಿಸುವುದಿಲ್ಲ,

ಅಧ್ಯಕ್ಷರು.—ಮಾನ್ಯ ಸದಸ್ಯರು ತಿದ್ದುಪಡಿಗೆ ಒತ್ತಾಯಿಸುವುದಿಲ್ಲ.

(Amendment by leave of the House was withdrawn)

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ.—

" (1) After the words" (hereinafter referred to as the principal Act", the brackets and figures, "(1)" shall be inserted."

" (2) In the third proviso or the words "the Deputy Commissioner may, after previous publication," substitute "the Deputy Commissioner may".

"At the end the following shall be inserted namely.—

(2) for sub-section (3), substitute the following,—

(3) The Commissioner may, either on an application made within Thirty days from the date of the notification by any person aggrived by such notification, or suomoto, and after giving a reasonable opportunity of being heard to the applicant or the Mandals concerned revise the order of the DeputyCommissione runder sub-section(1)or sub-section (2) and may also, if he considers necessary, modify it, as provided in the Third proviso to sub-section. Every order so passed, revising or modifying the order of the Deputy Commissioner, shall be publlshed in the official Gazette "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ತಿದ್ದುಪಡಿಯಾದ ಖಂಡ ೨, ವಿಧೇಯಕದ ಅಂಗವಾಗಿ ಸೇರಿಸಲ್ಪಟ್ಟಿತು

ಖಂಡ ೩ ರಿಂದ ೫ ರವರೆಗೆ

ಅಧ್ಯಕ್ಷರು.—ಖಂಡ ೩ ರಿಂದ ೫ ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೩ ರಿಂದ ೫ ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೬ ರಿಂದ ೧೦ರ ವರೆಗೆ

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರು ಖಂಡ ೬ಕ್ಕೆ ತಿದ್ದುಪಡಿ ಸೂಚನೆಯನ್ನು ಕೊಟ್ಟಿದ್ದಾರೆ. ಅವರು ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ನನ್ನ ತಿದ್ದುಪಡಿ ಏನೆಂದರೆ, "೧೫ ಸಾವಿರದ ಬದಲು ಅವರು ೨೮ ಸಾವಿರ ಎಂದು ಹೇಳಿದ್ದಾರೆ. ೩೫ ಸಾವಿರ ಓಟರ್ಸ್‌ಗೆ ಇಲೆಕ್ಷನ್ ನಡೆಸುವುದು ಎಂದರೆ ಮಿನಿ ಇಲೆಕ್ಷನ್ ಆದಂತಾಗುತ್ತದೆ.'' ಆದುದರಿಂದ......

ಶ್ರೀ ಅಬ್ದುಲ್ ನಜೀರ್‌ಸಾಬ್.—೩೫ ಸಾವಿರ ಜನಸಂಖ್ಯೆ ಅಲ್ಲ. ೨೮ ಸಾವಿರಕ್ಕೆ ಎಂದರೆ ಸುಮಾರು ೧೪ ಸಾವಿರ ಓಟುಗಳು ಆಗುತ್ತವೆ, ಜಾಸ್ತಿ ಆಗುವುದಿಲ್ಲ. ಜಿಲ್ಲಾ ಪರಿಷತ್ತಿಗೆ ಅಷ್ಟು ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ಆದುದರಿಂದ ಮಾನ್ಯ ಸದಸ್ಯರು ದಯಮಾಡಿ ಅವರ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಆಯಿತು ಸ್ವಾಮಿ ನಾನು ನನ್ನ ತಿದ್ದುಪಡಿಯನ್ನು ಮಂಡಿಸಲು ಒತ್ತಾಯಿಸುವುದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಂಡರು.

(The Amendment by leave of the House was withdrawn)

ಅಧ್ಯಕ್ಷರು.—ಈಗ ಪ್ರಸ್ತಾವ ಏನೆಂದರೆ, "ಖಂಡ ೬ ರಿಂದ ೧೦ರ ವರೆಗೆ ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೬ ರಿಂದ ೧೦ರ ವರೆಗೆ ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿ ಸೇರಿಸಲ್ಪಟ್ಟಿತು)

ಮೊದಲನೇ ಖಂಡ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ, ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—"೧೯೮೬ನೇ ಇಸವಿಯ ಕರ್ನಾಟಕ ರಾಜ್ಯ ಜಿಲ್ಲಾ ಪರಿಷತ್ತು ಮತ್ತು ತಾಲ್ಲೂಕು ಪಂಚಾಯತ್ ಸಮಿತಿಗಳು ಮತ್ತು ನ್ಯಾಯ ಪಂಚಾಯತಿಗಳ ತಿದ್ದುಪಡಿ ವಿಧೇಯಕಗಳನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, "೧೯೮೬ನೇ ಇಸವಿಯ ಕರ್ನಾಟಕ ರಾಜ್ಯ ಜಿಲ್ಲಾಪರಿಷತ್ತು ಮತ್ತು ತಾಲ್ಲೂಕು ಪಂಚಾಯತ್ ಸಮಿತಿಗಳು ಮತ್ತು ನ್ಯಾಯ ಪಂಚಾಯತಿಗಳ ತಿದ್ದುಪಡಿ ವಿಧೇಯಕಗಳನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

STATEMENT BY THE MINISTER

Appointment of Financial Commission for Zilla Parishath and Taluk Panchayath Samithis.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಅಧ್ಯಕ್ಷರೇ ಒಂದು ವಿಷಯವನ್ನು ನಾನು ಅನೌನ್ಸ್ ಮಾಡಬೇಕೆಂದು ಇದ್ದೀನೆ. ಅದೇನೆಂದರೆ ಜಿಲ್ಲಾಪರಿಷತ್ ಮತ್ತು ಸರ್ಕಾರದ ನಡುವೆ ಒಂದು ಹಣಕಾಸಿನ ನಿಯೋಗವನ್ನು ರಚನೆ ಮಾಡಿದ್ದೇವೆ. ಈ ನಿಯೋಗದ ಅಧ್ಯಕ್ಷರು ಐ.ಎಂ.ಐ. ಅಧ್ಯಕ್ಷರಾದ ಡಾಕ್ಟರ್ ಹೊನ್ನಾವರ್‌ರವರು. ಮತ್ತು ನಿವೃತ್ತ ಆಡಿಟರ್ ಜನರಲ್ ಆರ್. ಕೆ. ಚಂದ್ರಶೇಖರ್‌ರವರು ಸದಸ್ಯರಲ್ಲಿ ಒಬ್ಬರು. ರಾಜ್ಯ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಶ್ರೀ ಬಿ. ಜಿ. ಪುರಾಣಿಕ್‌ರವರು ಕಾರ್ಯದರ್ಶಿಯಾಗಿರುತ್ತಾರೆಂದು ನಾನು ತಿಳಿಸಬಯಸುತ್ತೇನೆ.

LEGISLATIVE BUSINESS

The Karnataka Lokayukth (Amendment Bill) 1986

Motion to consider

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ "ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ, ೧೯೮೬ ಮಸೂದೆಯನ್ನು ಪರ್ಯಾಲೋಚಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ."

Question was proposed

ಅಧ್ಯಕ್ಷರು.—ಕರ್ನಾಟಕ ಲೋಕಾಯುಕ್ತ ತಿದ್ದುಪಡಿ ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಈಗ ಸಮಯ ೫-೩೦ ನಿಮಿಷಗಳಾಯಿತು. ನಾವು ಬೆಳಿಗ್ಗೆ ೧೧-೦೦ ಗಂಟೆಯಿಂದ ಇಲ್ಲಿ ಕುಳಿತುಕೊಂಡಿದ್ದೇವೆ. ನಮ್ಮಲ್ಲಿ ಕೆಲವರು ಬೆಳಿಗ್ಗೆಯಿಂದ ಊಟ ಸಹ ಮಾಡಿಲ್ಲ. ಆದ್ದರಿಂದ ಈ ಸಭೆಯನ್ನು ಮುಂದೂಡಿ ನಾಳೆ ಬೇಕಾದರೆ ತೆಗೆದುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಇದು ಬಹಳ ಸಣ್ಣ ತಿದ್ದುಪಡಿ ವಿಧೇಯಕ.

ಅಧ್ಯಕ್ಷರು.—ಬೇಗ ಮುಗಿಸಿಬಿಡೋಣ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಈ ವಿಧೇಯಕದ ಬಗ್ಗೆ ವಿರೋಧಪಕ್ಷದ ಸದಸ್ಯರ ವಿರೋಧ ಇದೆ. ಈ ತಿದ್ದುಪಡಿ ವಿಧೇಯಕದ ಬಗ್ಗೆ ಕೆಲವರು ಮಾತನಾಡುವವರಿದ್ದಾರೆ. ಆದ್ದರಿಂದ ಇದನ್ನು ನಾಳೆ ತೆಗೆದುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಆಗಬಹುದು.

ಅಧ್ಯಕ್ಷರು.—ಈಗ ಅರ್ಧ ಗಂಟೆಯ ಚರ್ಚೆಗೆ ಸಂಬಂಧಪಟ್ಟಂತೆ ಮಾನ್ಯ ಮೋಹಿನುದ್ದೀನ್‌ರವರು ಮಾತನಾಡಬಹುದು.